
# ದೀಪ್ತಶೃಂಗಗಳು

## ವ್ಯಕ್ತಿಚಿತ್ರಗಳು



ಎಸ್. ಆರ್. ರಾಮಸ್ವಾಮಿ

# 1. ಎನ್. ರಂಗನಾಥಶರ್ಮಾ

ಪರಂಪರೆಗೆ, ಶಾಸ್ತ್ರದ ಸ್ಪಷ್ಟೀಕರಣಕ್ಕೆ, ಸಮಾಜದ ಪ್ರಬೋಧನೆಗೆ, ಮೌಲ್ಯಜಾಗೃತಿಗೆ – ಈ ಎಲ್ಲ ಆವಶ್ಯಕತೆಗಳಿಗೂ ಉನ್ನತಮಟ್ಟದ ಕೊಡುಗೆಯನ್ನು ನೀಡಿದವರು ನಮ್ಮ ನಡುವೆಯೇ ಇದ್ದ ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥಶರ್ಮಾ (1916–2014). ಅವರಷ್ಟು ಅಧಿಕಪ್ರಮಾಣದಲ್ಲಿ ಮತ್ತು ಶ್ರೇಷ್ಠಮಟ್ಟದಲ್ಲಿ ಋಷಿಋಣ ಸಂದಾಯ ಮಾಡಿದವರು ಇಡೀ ದೇಶದಲ್ಲಿ ಬೆರಳೆಣಿಕೆಯಷ್ಟೆ ದೊರೆತಾರು. ಇನ್ನು ಅಧ್ಯಯನ–ಅಧ್ಯಾಪನಗಳಲ್ಲಿಯೂ ಲೇಖನ–ಪ್ರವಚನಗಳಲ್ಲಿಯೂ ಅವರು ತೋರಿದ ನಿತಾಂತ ಶ್ರದ್ಧೆಯಂತೂ ಅನುಪಮವಾದುದು, ವಿರಳವಾದುದು. ಪಂಡಿತಸಮುದಾಯದಲ್ಲಿ ಬರವಣಿಗೆಯ ಅಭ್ಯಾಸವನ್ನು ರೂಢಿಸಿಕೊಂಡ ವಿರಳರಲ್ಲೊಬ್ಬರು ಶರ್ಮರು. ಸಂಸ್ಕೃತವಲ್ಲದೆ ಹಳಗನ್ನಡ, ಹೊಸಗನ್ನಡಗಳಲ್ಲಿಯೂ ಪ್ರಭುತ್ವ ಪಡೆದು ಸ್ವತಂತ್ರ ವ್ಯಾಖ್ಯಾನಗಳಿಂದಲೂ ಪ್ರವಚನಗಳಿಂದಲೂ ಅನುವಾದಗಳಿಂದಲೂ ಅವರು ಕನ್ನಡವನ್ನು ಶ್ರೀಮಂತಗೊಳಿಸಿದುದು ಒಂದು ಅತುಲ್ಯ ವಾಙ್ಮಯಾಧ್ವರ.

## ಸತತ ಸರಸ್ವತ್ಯಾರಾಧನೆ

ಶಾಸ್ತ್ರಪಾಂಡಿತ್ಯದ ಗಳಿಕೆ ಅತ್ಯಂತ ಕಷ್ಟಸಾಧ್ಯವಾದದ್ದು. ಯಾವುದೋ ಒಂದು ಶಾಸ್ತ್ರವನ್ನು ಸ್ವಾಧೀನಪಡಿಸಿಕೊಳ್ಳಲು ದಶಕಗಳೇ ಹಿಡಿಯುತ್ತದೆ. ರಂಗನಾಥಶರ್ಮರು ಅನೇಕ ಪ್ರತಿಕೂಲ ಸಂದರ್ಭಗಳ ನಡುವೆಯೂ ವ್ಯಾಕರಣಶಾಸ್ತ್ರದಲ್ಲಿಯೂ ಅಲಂಕಾರಶಾಸ್ತ್ರದಲ್ಲಿಯೂ ಪ್ರಭುತ್ವವನ್ನು ಸಾಧಿಸಿದ್ದರು. ಇವಲ್ಲದೆ ಸ್ವಂತ ಆಸಕ್ತಿಯಿಂದ ವೇದಾಂತದರ್ಶನದಲ್ಲಿಯೂ ಪರಿಶ್ರಮ ಮಾಡಿ ಆ ಜಟಿಲದರ್ಶನದ ಸೂಕ್ಷ್ಮಾಂಶಗಳ ಪರಿಜ್ಞಾನವನ್ನೂ ಪಡೆದಿದ್ದರು. ಹೀಗೆ ಶೇಖರಿಸಿಕೊಂಡ ಜ್ಞಾನರಾಶಿಯ ಪ್ರಯೋಜನ ಸಮಾಜಕ್ಕೆ ದೊರೆಯಬೇಕೆಂಬ ಆಸ್ಥೆಯಿಂದ ನಿರಂತರವಾಗಿ ಲೇಖನವ್ಯವಸಾಯದಲ್ಲಿಯೂ ತೊಡಗಿಕೊಂಡು ವಿಸ್ಮಯಕರವೆನಿಸುವಷ್ಟು ಸ್ವತಂತ್ರ ಹಾಗೂ ವ್ಯಾಖ್ಯಾನರೂಪದ ಗ್ರಂಥರತ್ನಗಳನ್ನು ಕನ್ನಡ ಓದುಗರಿಗೆ ನೀಡಿದರು.

ಇಷ್ಟು ಅಗಾಧಪ್ರಮಾಣದ ಮತ್ತು ಇಷ್ಟು ವೈವಿಧ್ಯಮಯವಾದ ಸಾರಸ್ವತಸೇವೆ ಮಾಡಿರುವವರು ವಿರಳ. ಅವರ ಬರಹದ ಗಾತ್ರದಂತೆ ಗುಣವತ್ತತೆಯೂ ಅಸಾಧಾರಣ ಮಟ್ಟದ್ದು. ಶಾಸ್ತ್ರಪ್ರಭುತ್ವದೊಡನೆ ಸತತವಾದ ತಪಃಸದೃಶ ಚಿಂತನ–ಮಂಥನ

ಮೇಳವಿಸಿ ಈ ಅನುಪಮ ಸರಸ್ವತ್ಯಾರಾಧನೆಯನ್ನು ಸಾಧ್ಯವಾಗಿಸಿತ್ತು. ವಯಸ್ಸು 90ರ ಆಸುಪಾಸಿನಲ್ಲಿದ್ದಾಗ ಪ್ರಕೃತಿಸಹಜ ದೈಹಿಕದೌರ್ಬಲ್ಯಗಳ ಆಕ್ರಮಣಕ್ಕೆ ಒಳಗಾದ ಸ್ಥಿತಿಯಲ್ಲಿ ಅವರು 'ತೈತ್ತಿರೀಯೋಪನಿಷತ್‌ಪ್ರವಚನ', 'ಮಾಂಡೂಕ್ಯಪ್ರವಚನ'ಗಳಂತಹ ಉನ್ನತವೂ ಸ್ವೋಪಜ್ಞವೂ ಆದ ಕೃತಿಗಳನ್ನು ರಚಿಸಿದುದನ್ನಂತೂ ದೊಡ್ಡ ವಿಸ್ಮಯ ವೆಂದೇ ಭಾವಿಸಬೇಕಾಗಿದೆ. ಅವರ ಕಣ್ಣು–ಕಿವಿಗಳ ಪಾಟವ ಕಡಮೆಯಾಗಿ ಹಲವು ವರ್ಷಗಳೇ ಆಗಿದ್ದವು. ವಯಸ್ಸು ಎಂಬತ್ತೈದು ದಾಟಿದ ಮೇಲೆ ಅವರು ಬಹುಮಟ್ಟಿಗೆ 'ಪ್ರಜ್ಞಾಚಕ್ಷು'ಗಳೇ ಆಗಿದ್ದರು. ಈ ಸ್ಥಿತಿಯಲ್ಲಿ ಓದಿ ಹೇಳುವವರ ಮತ್ತು ಹೇಳಿದುದನ್ನು ಬರೆದುಕೊಳ್ಳುವವರ ನೆರವನ್ನು ಪಡೆದು ಕ್ಲಿಷ್ಟತೆಗಳು ತುಂಬಿದ ದಾರ್ಶನಿಕ ಗ್ರಂಥಗಳನ್ನು ನೀಡಿರುವುದಕ್ಕೆ ಅದ್ಭುತವೆಂದಲ್ಲದೆ ಬೇರೆ ಯಾವ ಮಾತು ಸಲ್ಲುತ್ತದೆ?

ಶರ್ಮರು ಪಾರಂಪರಿಕಜ್ಞಾನವನ್ನು ಅರಗಿಸಿಕೊಂಡು ತಮ್ಮ ಪೀಳಿಗೆಯವರಿಗೆ ಸಮರ್ಥವಾಗಿ ದಾಟಿಸಿದರಷ್ಟೆ ಅಲ್ಲ; ಪರಂಪರೆಯಲ್ಲಿ ಅಸ್ಪಷ್ಟವಾಗಿದ್ದ ಅನೇಕ ಸಂಗತಿಗಳನ್ನು ಸ್ವತಂತ್ರವಾಗಿ ಮಥನ ಮಾಡಿ ಸ್ಫುಟೀಕರಿಸಿದರು. ಶಾಸ್ತ್ರನಿಷ್ಠೆಯೊಡನೆ ಸಂಶೋಧಕವೃತ್ತಿಯೂ ಅವರಲ್ಲಿ ಪ್ರಖರವಾಗಿ ಇದ್ದಿತು. ಎಷ್ಟೋ ವಿಷಯಗಳಲ್ಲಿ ಹಿಂದೆ ನಡೆದಿದ್ದುದಕ್ಕಿಂತ ಹೆಚ್ಚಿನ ವಿಶ್ಲೇಷಣೆಯ ಆವಶ್ಯಕತೆ ಇದ್ದಿತೆಂಬುದನ್ನು ಗಮನಿಸಿದ್ದವರೇ ವಿರಳ. ಮೇಲ್ನೋರಿಕೆಗೆ ಸರಳವೆನಿಸುವ ಎಷ್ಟೋ ಸಾಂಪ್ರದಾಯಿಕ ಧೋರಣೆಗಳ ಒಳಹೊಕ್ಕು ನೋಡುವಾಗ ಸಮಸ್ಯೆಗಳ ಹುತ್ತಗಳೇ ಕಾಣುತ್ತವೆ. ನಿದರ್ಶನಕ್ಕೆ : ಒಮ್ಮೆ ಅವರು ಆಳವಾದ ಪರಾಮರ್ಶನೆಗೆ ಎತ್ತಿಕೊಂಡಿದ್ದ ವಿಷಯ – ಜಡವಾದ ಅನ್ನದಿಂದ ಸಚೇತನವಾದ ಜೀವ ಹೇಗೆ ಆವಿರ್ಭವಿಸುತ್ತದೆ – ಎಂಬುದು.

ಅವರ ಅವಸಾನಕ್ಕೆ ಸ್ವಲ್ಪ ಪೂರ್ವದಲ್ಲಿಯೂ ಈ ಕಾರ್ಯಶ್ರದ್ಧೆ ಮಸುಕಾಗಿರಲಿಲ್ಲ. ಕಣ್ಣು, ಕಿವಿ, ಕೈಕಾಲು – ಎಲ್ಲ ಅಂಗಗಳ ಪಾಟವವೂ ಕ್ಷೀಣಿಸಿತ್ತು. ಆ ಸ್ಥಿತಿಯಲ್ಲಿಯೂ ಅವರ ಬೌದ್ಧಿಕವ್ಯಾಪಾರಕ್ಕೆ ಅವರು ಬಿಡುವು ಕೊಟ್ಟಿರಲಿಲ್ಲ. ಆ ದಿನಗಳಲ್ಲಿ ಅವರು ಶೋಧಿಸುತ್ತಿದ್ದ ವಿಷಯ : ಎಲ್ಲಕ್ಕೂ ಆದಿಯಲ್ಲಿ ವರ್ಣದ ಉತ್ಪತ್ತಿ ಹೇಗೆ ಆಯಿತು? – ಇತ್ಯಾದಿ ಶಬ್ದಶಾಸ್ತ್ರವಿಷಯ. ಶಬ್ದದ ಮತ್ತು ಅರ್ಥದ ಆವಿಷ್ಕಾರ ಆಗುವುದು ಹೇಗೆ? ಯಾವುದೋ ಒಂದು ಭಾಷೆಯು ರೂಪ ತಳೆದ ಮೇಲೆ ಅದು ಹೇಗೆ ವಿಕಾಸಗೊಳ್ಳುತ್ತಹೋಗುತ್ತದೆ, ಹೇಗೆ ಅದರ ಪ್ರಕಾರಾಂತರಗಳು ಹುಟ್ಟುತ್ತವೆ – ಈ ಸಂಗತಿಗಳಿಗೆ ಸಂಬಂಧಿಸಿದಂತೆ ಒಂದಷ್ಟು ಶಾಸ್ತ್ರೀಯ ವಿವರಗಳು ಸಿಗುತ್ತವೆ. ಆದರೆ ಎಲ್ಲಕ್ಕಿಂತ ಮೊದಲು ಒಂದು ಖಚಿತ ಅರ್ಥವ್ಯಂಜನೆಗಾಗಿ ಒಂದು ಖಚಿತ ಶಬ್ದ ಅಥವಾ ಅಕ್ಷರಸಂಯೋಜನೆ ಹೇಗೆ ಸಾಮರ್ಥ್ಯ ಪಡೆದುಕೊಳ್ಳುತ್ತದೆ? – ಎಂದು ಶರ್ಮರು ವಿವೇಚಿಸತೊಡಗಿದ್ದರು. ಪ್ರಕಟಿತ ಭಾಷಾಶಾಸ್ತ್ರವಾಙ್ಮಯದಲ್ಲಿ ಎಲ್ಲಿಯೂ ಇದಕ್ಕೆ ಪೂರ್ಣ ಸಮರ್ಪಕವೆನಿಸುವ ಸಮಾಧಾನ ದೊರೆತಿರಲಿಲ್ಲ. ಈ ವಿಷಯವಾದರೋ ವ್ಯಾಕರಣದ ಮತ್ತು ಭಾಷಾವಿಜ್ಞಾನದ ಉದ್ಗಮಕ್ಕೂ ಪೂರ್ವದ ಸ್ಥಿತಿಗೆ ಸಂಬಂಧಿಸಿದುದು. ಇದನ್ನು

ಕುರಿತು ತಮ್ಮ ಕೆಲವು ಚಿಂತನೆಗಳನ್ನು ಸಹಾಯಕರೊಬ್ಬರಿಗೆ ಹೇಳಿ ಬರೆಯಿಸಿಯೂ ಇದ್ದರು. ಆದರೆ ಅವರ ಈ ಶೋಧವು ಅರ್ಧಾಂತಕವಾಗಬೇಕಾಯಿತು. "ಬೇರೆ ಯಾವ ಸಮರ್ಥ ಸಮಾಧಾನವೂ ಲಭ್ಯವಿರದಿದ್ದಲ್ಲಿ 'ಮಹಾದೇವೋ ಮರ್ತ್ಯಾನ್ ಆವಿವೇಶ' ಎಂಬ ಶ್ರುತ್ಯುಕ್ತಿಯನ್ನೇ ಆಶ್ರಯಿಸಬೇಕಾಗುತ್ತದೇನೊ" ಎನ್ನುತ್ತಿದ್ದರು.

## ಬಾಲ್ಯ, ಅಧ್ಯಯನ, ಅಧ್ಯಾಪನ

ರಂಗನಾಥಶರ್ಮರು (ಜನನ: 1916ರ ವೈಶಾಖ ಶುದ್ಧ ಪಂಚಮಿ, ಶಂಕರಜಯಂತಿಯಂದು) ವಿದ್ಯಾರ್ಥಿದಶೆಯಲ್ಲಿ ಅನುಭವಿಸಿದ ಕ್ಲೇಶಗಳು ಮರ್ಮಭೇದಕವಾದವು. ಅವರ ಬಗೆಗೆ ಒಬ್ಬಿಬ್ಬ ನಿಕಟಬಂಧುಗಳೇ ತೋರಿದ ಅಸಡ್ಡೆ; ಮೊದಲೇ ಸೂಕ್ಷ್ಮವಾಗಿದ್ದ ಶರೀರವು ಸಾಮಾನ್ಯಮಟ್ಟದ ಪೋಷಣೆಯೂ ಅಲಭ್ಯವಾಗಿದ್ದುದರಿಂದ ಕಾಯಿಲೆಗಳಿಗೆ ತೆರೆದ ಬಾಗಿಲಿನಂತಾಗಿದ್ದುದು; – ಈ ಸ್ಥಿತಿಯಲ್ಲಿ ಹದಿ-ತಾರುಣ್ಯದ ವರ್ಷಗಳನ್ನು ಅವರು ಕಳೆಯಬೇಕಾಯಿತು. ಅವರ ಜೀವನ-ಲಕ್ಷ್ಯವಾದ ಜ್ಞಾನಾರ್ಜನೆ ಆ ಸ್ಥಿತಿಯಲ್ಲಿಯೆ ನಡೆಯಬೇಕಾಯಿತು. ಅಂತಹ ಅನುತ್ಸಾಹಕರ ಸನ್ನಿವೇಶದಲ್ಲಿಯೂ ಶರ್ಮರು ಅಂತರಂಗದ ಸ್ತಿಮಿತತೆಯನ್ನು ಕಳೆದುಕೊಳ್ಳದೆ ಏಕಾಗ್ರತೆಯಿಂದ ಅಧ್ಯಯನದಲ್ಲಿ ಮಗ್ನರಾಗಿ ಗುರಿಯನ್ನು ಸಾಧಿಸಿದುದು ಅಸಾಮಾನ್ಯ ಸಾಹಸವೆಂದು ಹೇಳಬೇಕಾಗುತ್ತದೆ.

ಆ ದಿನಗಳಲ್ಲಿ – ಎಂದರೆ ಈಗ್ಗೆ ಎಂಬತ್ತು ವರ್ಷಗಳ ಹಿಂದೆ – ಪರಸ್ಥಳಗಳಿಂದ ಬಂದಿದ್ದ ಬಡ ವಿದ್ಯಾರ್ಥಿಗಳಿಗೆ ಮುಖ್ಯ ಅವಲಂಬವಾಗಿದ್ದ ವಾರಾನ್ನದ ವ್ಯವಸ್ಥೆಯೂ ಸದಾ ಸಮರ್ಪಕವೆನ್ನುವ ಮಟ್ಟದಲ್ಲಿ ಇರುತ್ತಿರಲಿಲ್ಲ. ಶರ್ಮರು ಕೈಗೆ ಸಿಕ್ಕಿದ ಏನನ್ನೋ ಹೇಗೋ ಬೇಯಿಸಿ ಉಂಡು ಕಾಲಹಾಕಿದ ದಿನಗಳಿಗೂ ಲೆಕ್ಕವಿಲ್ಲ. ಆ 'ಕದನ್ನ'ವನ್ನು ಉಣ್ಣಲೂ ಮುತ್ತುಗದೆಲೆಯೂ ಇಲ್ಲದೆ ಹಲವೊಮ್ಮೆ ನೆಲದ ಮೇಲೆಯೆ ಸುರಿದುಕೊಂಡು ನಿರ್ವಾಹ ಮಾಡಿದುದೂ ಇತ್ತಂತೆ. ಈ ವೈಭೋಗ ಸಾಲದೆಂಬಂತೆ ಭೀಕರ ಚರ್ಮರೋಗವೂ ಅತಿಸಾರವೂ ದಾಳಿಮಾಡಿದವು.

ಒಮ್ಮೆಯಂತೂ ತೀವ್ರ ಜ್ವರಗ್ರಸ್ತರಾಗಿ ಚಿಕಿತ್ಸೆಗೂ ಆರೈಕೆಗೂ ಅತ್ಯಲ್ಪ ಸೌಕರ್ಯವೂ ಇರದಿದ್ದಾಗ, ಕಾಯಿಲೆಯಿಂದ ಚೇತರಿಸಿಕೊಳ್ಳಲಾರೆನೇನೊ ಎನಿಸಿ, ವಿಷಯವಾದರೂ ಮನೆಯವರಿಗೆ ತಿಳಿಯಲೆಂದೆನಿಸಿ ಪತ್ರ ಬರೆದಾಗ, ಅವರ ಪಾಲಕರ ಸ್ಥಾನದಲ್ಲಿರಬೇಕಾಗಿದ್ದ ಮಹಾಶಯರು ಈ ಸಂಗತಿಯನ್ನು ಮನೆಮಂದಿಗೆ ತಿಳಿಸುವ ಗೋಜಿಗೂ ಹೋಗಿರಲಿಲ್ಲ!

ಇಂತಹ ಅನಾದರವನ್ನೂ ಶರ್ಮರು ಅನುಭವಿಸಿದ್ದರು.

ಅತಿಶಯವೆಂದರೆ ಅಂತಹ ದುರ್ಭರ ಸನ್ನಿವೇಶಗಳ ಬಗೆಗೆ ಶರ್ಮರು ಮನಸ್ಸನ್ನು ಕಹಿಗೊಳಿಸಿಕೊಳ್ಳದಿದ್ದುದು. ಎಂತಹವರನ್ನಾದರೂ ಕುಗ್ಗಿಸುವಂತಹ ಆ ಕಾಲಾವಧಿಯನ್ನು ಕುರಿತು ಇಳಿವಯಸ್ಸಿನಲ್ಲಿ ಆಪ್ತವಲಯದಲ್ಲಿ ಮಾತನಾಡುವಾಗ ಶರ್ಮರು ಅದನ್ನೆಲ್ಲ ನಗುಮುಖದಿಂದಲೇ ವಿವರಿಸುತ್ತಿದ್ದರು. ಕೆಲವೊಮ್ಮೆ 'ಅದೆಲ್ಲ ಏನ್ರೀ ವಿಶೇಷ! ನಮ್ಮಂತೆ ಪಾಡುಪಟ್ಟವರು ಲೆಕ್ಕವಿಲ್ಲದಷ್ಟು ಜನ ಇರುತ್ತಾರಲ್ಲವೆ' ಎನ್ನುತ್ತಿದ್ದರು.

ಆ ಕಾಲದಲ್ಲಿ ಮುದ್ರಿತ ಗ್ರಂಥಗಳ ಬೆಲೆ ಹೆಚ್ಚಿರದೆ ಸಾಮಾನ್ಯಮಟ್ಟದಲ್ಲಿಯೆ ಇರುತ್ತಿದ್ದರೂ ಆ ಅಲ್ಪ ಹಣವೂ ತಮ್ಮಲ್ಲಿ ಲಭ್ಯವಿರದ ಕಾರಣ ಶರ್ಮರು ಪಾಠ್ಯಗ್ರಂಥಗಳನ್ನು ತಮ್ಮ ಕೈಯಿಂದಲೇ ಬರೆದು ಇರಿಸಿಕೊಳ್ಳಬೇಕಾದ ಪರಿಸ್ಥಿತಿ ಇದ್ದಿತು.

ವಿದ್ಯಾರ್ಥಿದಶೆಯ ಪ್ರತಿ ಹಂತದಲ್ಲೂ ಅವರು ಅಪಾರ ಕ್ಲೇಶಗಳನ್ನು ಎದುರಿಸಿಯೇ ಸಾಗಬೇಕಾಯಿತು. ಆ ಕ್ಲೇಶಗಳನ್ನೂ ಹಲವು ಹಂತಗಳಲ್ಲಿ ಅವರು ತೀವ್ರ ಅನಾದರಕ್ಕೆ ತುತ್ತಾದುದನ್ನೂ ಮೆಲುಕುಹಾಕುವಾಗ ಅವರಿಂದ ಅತ್ಯಲ್ಪ ಕಹಿಭಾವನೆಯೂ ವ್ಯಕ್ತವಾಗುತ್ತಿರಲಿಲ್ಲ. ಪ್ರತಿಯಾಗಿ 'ಇವೆಲ್ಲ ಅಸಾಮಾನ್ಯವೆಂದು ಭಾವಿಸಬೇಕಾದದ್ದಿಲ್ಲ. ಬದುಕು ಇರುವುದೇ ಹೀಗೆ' ಎಂಬ ಸ್ಥೈರ್ಯಭಾವ ಅವರದಾಗಿತ್ತು.

ಇಂತಹ ಬವಣೆಗಳ ಹಿನ್ನೆಲೆ ಇದ್ದೂ ಮಧ್ಯವಯಸ್ಸು ದಾಟಿದ ಮೇಲೆ ಅವರು ವಿದ್ಯಾರ್ಥಿಗಳಲ್ಲಿಯೂ ನಂಟರಿಷ್ಟರಲ್ಲಿಯೂ ತಮ್ಮ ಕೈಚಾಚಿಗೆ ಮೀರಿ ಔದಾರ್ಯ ತೋರುತ್ತಿದ್ದುದನ್ನು ಉದಾತ್ತವೆನ್ನಬೇಕು.

ಲೋಕಪರಿಸ್ಥಿತಿಯ ಬಗೆಗೆ ದೂರುತ್ತ ಕೂಡದೆ ಕೈಗೊದಗಿದ ಕರ್ತವ್ಯವನ್ನು ಶ್ರದ್ಧೆಯಿಂದ ನಿರ್ವಹಿಸುವುದರ ಮೂಲಕ ಬದುಕನ್ನು ಸಹನೀಯವಾಗಿಸಿಕೊಳ್ಳಬೇಕು – ಎಂಬ ಜೀವನದರ್ಶನವನ್ನು ಶರ್ಮರು ಅದು ಹೇಗೋ ಬಾಲ್ಯದಿಂದಲೇ ಮೈಗೂಡಿಸಿಕೊಂಡಿದ್ದರು ಎನಿಸುತ್ತದೆ.

ಗಮ್ಯದಲ್ಲಿ ನೆಟ್ಟ ದೃಷ್ಟಿಯೂ ಅಂತರಂಗಸ್ಥೈರ್ಯವೂ ಇದ್ದುದರಿಂದ ಎಲ್ಲ ಬವಣೆಗಳ ನಡುವೆಯೇ ವ್ಯಾಕರಣಶಾಸ್ತ್ರ ಮತ್ತು ಅಲಂಕಾರಶಾಸ್ತ್ರಗಳಲ್ಲಿ ವಿದ್ವತ್ ಪದವಿಯನ್ನು ಪಡೆದರು. ಶರ್ಮರ ಬಾಹ್ಯಜೀವನಕ್ಕೆ ನಿಲುಗಡೆ ಲಭಿಸಿದುದು, ಸಾಮಾನ್ಯಮಟ್ಟದ ಆದರೆ ಹೆಚ್ಚಿನ ಕ್ಲೇಶವಿಲ್ಲದ ಬಾಳುವೆ ಎಟಕಿದುದು ಅವರ ಸುಮಾರು ಮೂವತ್ತೆರಡರ ವಯಸ್ಸಿನಲ್ಲಿ ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಕರಣಬೋಧಕರಾಗಿ ಸೇರುವ ಅವಕಾಶವಾದಾಗ (ಸು. 1948). ಅಲ್ಲಿಂದಾಚೆಗೆ ಆ ಪಾಠಶಾಲೆ ಇಪ್ಪತ್ತೆಂಟು ವರ್ಷಗಳ ಕಾಲ ಅವರ ಕಾರ್ಯಕ್ಷೇತ್ರವಾಯಿತು. ಈಚಿನ ದಶಕಗಳಲ್ಲಿ ಕೀರ್ತಿವಂತರಾಗಿರುವ ಹತ್ತಾರು ಸಂಸ್ಕೃತ ವಿದ್ವಾಂಸರು ಶರ್ಮರಲ್ಲಿ ಶಿಷ್ಯತ್ವ ಮಾಡಿದವರು.

ಕೆಳದಿಯಲ್ಲಿ ಕೇಶವಶಾಸ್ತ್ರಿಗಳು, ನಾರಾಯಣಶಾಸ್ತ್ರಿಗಳು, ಮತ್ತು ಬೆಂಗಳೂರು ಪಾಠಶಾಲೆಯಲ್ಲಿ ತಿರುನಾರಾಯಣ ಅಯ್ಯಂಗಾರ್ಯರು 'ವಾತ್ಸಲ್ಯಪೂರ್ಣವಾಗಿ ನೀಡಿದ ಶಿಕ್ಷಣ ನನ್ನನ್ನು ರೂಪಿಸಿತು' – ಎಂದು ಪಂಡಿತರು ಸದಾ ಆರ್ದ್ರತೆಯಿಂದ ನೆನೆಯುತ್ತಿದ್ದರು.

ಬೋಧನೆಯು ಶರ್ಮರಿಗೆ ಆದ್ಯತೆಯ ವಿಷಯವಾಗಿತ್ತು. ಅದನ್ನು ಅವರು ಭಗವದ್ವಿಹಿತ ಕರ್ತವ್ಯವಾಗಿ ಭಾವಿಸಿದ್ದರು. ಆದುದರಿಂದ ತಮ್ಮ ಉನ್ನತಿಯನ್ನು ಬದಿಗಿರಿಸಿ ಪ್ರಾಥಮಿಕ ಪಾಠನ ಮಾಡುವುದಕ್ಕೂ ಅವರು ಎಂದೂ ಬೇಸರಿಸಿದುದಿಲ್ಲ. ಅದು ಅವರಿಗೆ ಜಟಿಲ ಶಾಸ್ತ್ರಜಿಜ್ಞಾಸೆಯಷ್ಟೆ ಸಂತೃಪ್ತಿ ನೀಡುತ್ತಿತ್ತು.

ಅಧ್ಯಯನ–ಅಧ್ಯಾಪನಗಳಲ್ಲಿ ಶರ್ಮರು ತೋರುತ್ತಿದ್ದ ತನ್ಮಯತೆ ತಪಃಸದೃಶ ವಾದದ್ದು. ಒಬ್ಬನೇ ವಿದ್ಯಾರ್ಥಿ ಇರಲಿ ಹತ್ತು ಮಂದಿಯೇ ಇರಲಿ, ಶರ್ಮರ ಅಧ್ಯಾಪನಕ್ರಮದಲ್ಲಿ ಎಂದೂ ಶೈಥಿಲ್ಯ ನುಸುಳಿದುದಿಲ್ಲ. ಬೋಧಕತ್ವಗುಣ ಅವರಿಗೆ ರಕ್ತಗತ. ಕಲಿಯುವವರಿಂದ ಅವರು ಪೂರ್ಣ ಅವಧಾನವನ್ನು ನಿರೀಕ್ಷಿಸುತ್ತಿದ್ದರಾದರೂ, ಪ್ರಾಥಮಿಕ ಪ್ರಕ್ರಿಯೆಗಳನ್ನೂ ಮತ್ತೆ ಮತ್ತೆ ಸ್ಪಷ್ಟೀಕರಿಸಲು ಅವರು ಬೇಸರಪಡುತ್ತಿರಲಿಲ್ಲ.

ಇನ್ನು ಬೋಧನ–ಪ್ರವಚನ–ಲೇಖನಗಳು ಸೇರಿದಂತೆ ಎಲ್ಲ ಕಲಾಪಗಳಲ್ಲಿಯೂ ಅವರು ತೋರುತ್ತಿದ್ದ ಅಚ್ಚುಕಟ್ಟು ತುಂಬಾ ವಿರಳ ರೀತಿಯದು.

## ನಿರ್ಲಿಪ್ತಿ, ಔದಾರ್ಯ

ತಮ್ಮ ಎಸಕಕ್ಕೆ ಅವರು ಎಂದೂ ಪ್ರಚಾರ ಬಯಸಿದವರಲ್ಲ. ತಾವು ವಹಿಸಿಕೊಂಡ ಕಾರ್ಯವನ್ನು ನಿರ್ವಹಿಸಿದ್ದಾದ ಮೇಲೆ ಪೂರ್ಣ ನಿರ್ಲಿಪ್ತರಾಗಿಬಿಡುತ್ತಿದ್ದರು. ಅವರು ಒಂದೆರಡು ಪತ್ರಿಕೆಗಳಿಗೆ ಬೇರೆ ಹೆಸರಿನಲ್ಲಿ ಅಂಕಣಗಳನ್ನು ಬರೆಯುತ್ತಿದ್ದರು. ಈ ಲೇಖನಗಳನ್ನು ಅವರು ಬರೆಯುತ್ತಿದ್ದರೆಂಬುದು ಅವರ ಮನೆಯವರಿಗೂ ಎಷ್ಟೋ ವರ್ಷ ತಿಳಿದಿರಲೇ ಇಲ್ಲ.

ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರಸರ್ಕಾರದ ರಾಷ್ಟ್ರಪತಿ ಸಂಮಾನಗಳಿಂದ ದರ್ಭಾಂಗಾ ಸಂಸ್ಕೃತ ವಿಶ್ವವಿದ್ಯಾಲಯದ ಗೌರವ ಡಿ.ಲಿಟ್., ತಿರುಪತಿ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ 'ಮಹಾಮಹೋಪಾಧ್ಯಾಯ'ವರೆಗೆ ಅನೇಕ ಗೌರವಗಳನ್ನು ಶರ್ಮರು ಸ್ಥಿತಪ್ರಜ್ಞತೆಯಿಂದ ಸ್ವೀಕರಿಸಿದರು. ಎಷ್ಟೋ ಸಲ ಇವು ಅವರಿಗೆ ಲಘುಹಾಸ್ಯ ವಿಷಯಗಳೂ ಆಗುತ್ತಿದ್ದವು.

ಕೆಲವು ಅಂಶಗಳಲ್ಲಿ ಶರ್ಮರ ಬಗೆಗೆ ದೈವವು ಅದೇಕೋ ಕ್ರೂರವಾಗಿ ವರ್ತಿಸಿತು. ಶರ್ಮರ ಜೀವನವನ್ನು ಬೆಳಗಿದ್ದ ಸಹಧರ್ಮಿಣಿ ಕಮಲಾಕ್ಷಮ್ಮನವರು ಹಠಾತ್ತನೆ 1973ರಲ್ಲಿ ಅವರನ್ನು ಅಗಲಿದರು. ಈ ಅಗಲಿಕೆ ಶರ್ಮರನ್ನು ಚಿರಕಾಲ

ಬಾಧಿಸಿದುದು ಸಹಜ. ಅವರ ಇಬ್ಬರು ಪುತ್ರರೂ (ಶ್ರೀ ಸದಾನಂದ, ಡಾ॥ ನಾಗಭೂಷಣ), ಇಬ್ಬರು ಪುತ್ರಿಯರೂ (ಡಾ॥ ಜಯಶ್ರೀ, ಡಾ॥ ಶಾರದಾ ಚೈತ್ರ) ಅವರ ಸಂತಾನವೂ ವೃದ್ಧಿಂಗತರಾಗಿರುವುದು ಶರ್ಮರಿಗೆ ನೆಮ್ಮದಿಯನ್ನಿತ್ತಿತು.

* * *

## ಉನ್ನತ ಶಾಸ್ತ್ರಾಧಿಕಾರ

ಪಂಡಿತರ ಹೆಸರು ಮೊದಲು ನನ್ನ ಕಣ್ಣಿಗೆ ಬಿದ್ದದ್ದು 1954ರ ಸುಮಾರಿನಲ್ಲಿ. ಆ ದಿನಗಳಲ್ಲಿ ಪ್ರಕಟವಾಗುತ್ತಿದ್ದ ಪ್ರತಿಷ್ಠಿತ ವಾರಪತ್ರಿಕೆ 'ಜನಪ್ರಗತಿ'. ಅದರಲ್ಲಿ ರಂಗನಾಥಶರ್ಮರು ಆಗಷ್ಟೆ ಪ್ರಕಟಗೊಂಡಿದ್ದ ತೀ.ನಂ. ಶ್ರೀಕಂಠಯ್ಯನವರ 'ಭಾರತೀಯ ಕಾವ್ಯಮೀಮಾಂಸೆ' ಗ್ರಂಥವನ್ನು ಪರಾಮರ್ಶನೆ ಮಾಡಿ ಲೇಖನಮಾಲೆ ಬರೆದಿದ್ದರು. ಅದು ಉತ್ಕೃಷ್ಟ ಗ್ರಂಥದ ಉತ್ಕೃಷ್ಟ ಅವಲೋಕನವಾಗಿತ್ತು. ವಿಚಾರಿಸಿದಾಗ ಅವರು ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಬೋಧಕರಾಗಿದ್ದರೆಂದು ತಿಳಿಯಿತು. ಡಿ.ವಿ.ಜಿ.ಯವರೂ ಕುತೂಹಲಿಗಳಾಗಿದ್ದರು. ಅವರನ್ನು ಪರಿಚಯ ಮಾಡಿಕೊಳ್ಳಲು ಡಿ.ವಿ.ಜಿ. ಉತ್ಸುಕರಾಗಿದ್ದ ಸಂಗತಿ ತಿಳಿದೊಡನೆ ಶರ್ಮರು ಬಂದು ಭೇಟಿಯಾದರು. ಉಳಿದದ್ದು ಇತಿಹಾಸ. ಅವರದು 53–ಗ್ರೇಡ್ ಸಿಮೆಂಟ್ ಬಳಸಿದ ಬಂಧನ ಆಗಿಬಿಟ್ಟಿತು. ಕ್ರಮೇಣ ಅವರು ಗೋಖಲೆ ಸಂಸ್ಥೆಯ ಭಾಗವಾದರು. ಈ ವಿದ್ಯಾಲಯಕ್ಕೆ ಶರ್ಮರೇ ಕುಲಪತಿಗಳು ಎಂದು ಡಿ.ವಿ.ಜಿ. ಘೋಷಣೆ ಮಾಡಿಬಿಟ್ಟರು.

ಗೋಖಲೆ ಸಂಸ್ಥೆಯ ಆಚೆಗೂ ಶರ್ಮರ ಉನ್ನತ ಶಾಸ್ತ್ರಾಧಿಕಾರವನ್ನು ನೋಡಿ ಕೇಳಿ ಆನಂದಿಸುವ ಅವಕಾಶಗಳು ಇರುತ್ತಿದ್ದವು. ನನ್ನ ಗಾಢ ಸಂಬಂಧ ಇದ್ದ ಸನಾತನ ಕಲಾಕ್ಷೇತ್ರ 1961–62ರಲ್ಲಿ ನಾಟ್ಯ ಶಿಕ್ಷಕರಿಗಾಗಿ ಪ್ರಶಿಕ್ಷಣವರ್ಗವನ್ನು ಏರ್ಪಡಿಸಿತ್ತು. ಅದರಲ್ಲಿ ಪ್ರತಿ ಸಂಜೆ ರಂಗನಾಥಶರ್ಮರು ಭರತನ 'ನಾಟ್ಯಶಾಸ್ತ್ರ'ದ ಪ್ರಮುಖ ಪ್ರಮೇಯಗಳನ್ನು ಕುರಿತು ಉಪನ್ಯಾಸಗಳನ್ನು ನೀಡಿದರು. ಲಕ್ಷಣವಿವರಗಳಿಂದ ಆಚೆ ಸರಿದು ಶರ್ಮರು ಮಾಡುತ್ತಿದ್ದ ಪ್ರತಿಪಾದನೆಯು ನಾಟ್ಯ–ಯೋಗ–ಅಧ್ಯಾತ್ಮಗಳ ಪಾರಸ್ಪರಿಕತೆಯನ್ನು ಕುರಿತು ನನ್ನ ಮಿತ್ರ ವಿ.ಎಸ್. ಕೌಶಿಕ್ ತಳೆದಿದ್ದ ಕಲ್ಪನೆಗಳನ್ನು ಬಲಗೊಳಿಸಿತು. ಇನ್ನು ರಸ–ಭಾವ, ಚಿತ್ತವೃತ್ತಿಗಳು, ಅಲಂಕಾರಶಾಸ್ತ್ರದ ಪರಂಪರೆ ಕುರಿತು ಶರ್ಮರು ಮಾಡುತ್ತಿದ್ದ ವ್ಯಾಖ್ಯಾನಗಳಂತೂ ರಸದೌತಣವೇ ಆಗಿತ್ತು.

ಅಂತಹದೇ ಇನ್ನೊಂದು ಸಂದರ್ಭ, ಗೋಖಲೆ ಸಂಸ್ಥೆಯ ವೇದಿಕೆಯಲ್ಲಿ ಡಿ.ವಿ.ಜಿ.ಯವರ ಅಪೇಕ್ಷೆಯಂತೆ 1964–65ರಲ್ಲಿ ಶಬ್ದಶಾಸ್ತ್ರದ ಬೆಳವಣಿಗೆಯನ್ನೇ ಕುರಿತು ಶರ್ಮರು ಮಾಡಿದ ಉಪನ್ಯಾಸಮಾಲೆ. ಅದು ಅವಿಸ್ಮರಣೀಯವಾಗಿತ್ತು. ನಮಗೆಲ್ಲ ಸಾಂಪ್ರದಾಯಿಕ ಶಾಸ್ತ್ರವಿದ್ವತ್ತಿನ ಸ್ವರೂಪದ ನೇರ ಪರಿಚಯವಾಗಲಿ

ಎಂದೇ ಡಿ.ವಿ.ಜಿ. ಮಾಡಿದ ಯೋಜನೆ ಅದು. ಜೀವನದಲ್ಲಿ ಭಾಷೆಯ ಸ್ಥಾನ, ಭಾಷೆಯ ವ್ಯಾಪ್ತಿ-ಪರಿಮಿತಿಗಳು, ಶೀಕ್ಷಾದಿ ಶಾಸ್ತ್ರಗಳು, ಪಾಣಿನೀಯ ಹಾಗೂ ಪಾಣಿನೀಯೇತರ ವ್ಯಾಕರಣಗಳು, ವ್ಯಾಕರಣಶಾಸ್ತ್ರದ ಇತಿಹಾಸ, ವ್ಯಾಕರಣದ ಮತ್ತು ತರ್ಕಾದಿ ಶಾಸ್ತ್ರಾಂತರಗಳ ಪರಸ್ಪರಾವಲಂಬನೆ – ಈ ಹಲವಾರು ವಿಷಯಗಳ ಬಗೆಗೆ ಶರ್ಮರು ಎಷ್ಟು ಆಕರ್ಷಕವಾಗಿ ಉತ್ಸ್ಫೂರ್ತರಾಗಿ ಉಪನ್ಯಾಸಗಳನ್ನು ನೀಡಿದರೆಂದರೆ ಶಾಸ್ತ್ರವಿಷಯಗಳೂ ಇಷ್ಟು ರೋಚಕವಾಗಿರಬಹುದೆ ಎಂದು ನಮಗೆಲ್ಲ ಆಶ್ಚರ್ಯವಾಯಿತು. ಡಿ.ವಿ.ಜಿ.ಯವರಂತೂ ಎಷ್ಟು ಆನಂದಪಟ್ಟರೆಂದು ಹೇಳುವ ಆವಶ್ಯಕತೆ ಇಲ್ಲ. "ನೋಡಿ ಹುಡುಗರೇ, ಪಾಂಡಿತ್ಯವೆಂದರೆ ಇದು" – ಎಂದು ಉದ್ಗರಿಸಿದರು.

ಹೀಗೆ ಅಧಿಕಾರ, ಔಚಿತ್ಯಪ್ರಜ್ಞೆ, ಪ್ರಬೋಧನೋತ್ಸಾಹ – ಮೂರೂ ಸೇರಿ ಕೊಂಡಿದ್ದುದರಿಂದ ಶರ್ಮರು ತುಂಬಾ ಬೆಲೆಯುಳ್ಳ ಹತ್ತಾರು ಅನನ್ಯ ಕೃತಿರತ್ನಗಳನ್ನು ನೀಡುವುದು ಸಾಧ್ಯವಾಯಿತು. ಈ ಸತತ ಸರಸ್ವತ್ಯಾರಾಧನೆಯ ಶ್ರದ್ಧೆ ವಯಸ್ಸು 90 ದಾಟಿದ ಮೇಲೂ ಅವರಿಂದ ಅನುಪಮವಾದ ಶಾಸ್ತ್ರಸಾಹಿತ್ಯವನ್ನು ಹೊಮ್ಮಿಸಿದುದಂತೂ ವಿಸ್ಮಯಕರ. ಈ ಕಾರ್ಯದಲ್ಲಿ ಶರ್ಮರ ಕಣ್ಣೂ ಕೈಯೂ ಆಗಿ ಅವರ ಅನುಚರಣೆ ಮಾಡಿದ ಮಿತ್ರರಿಗೆ ವಿಶೇಷ ನಮನ ಸಲ್ಲುತ್ತದೆ.

## ವಾರಸಿಕೆ

ಶರ್ಮರು ಬಿಟ್ಟು ಹೋಗಿರುವ ವಾರಸಿಕೆಯನ್ನು ಮೆಲುಕುಹಾಕುವಾಗ ಕೆಲವು ವಿಶೇಷತೆಗಳು ಎದ್ದು ತೋರುತ್ತವೆ.

ಮೊದಲನೆಯದಾಗಿ – ಪಾಂಡಿತ್ಯ ಅದೇ ಒಂದು ಗುರಿಯಲ್ಲ, ಅದು ಸಾರ್ಥಕ ಕಾರ್ಯಕ್ಕೆ ಒಂದು ಸಾಧನ ಮಾತ್ರ – ಎನ್ನುವುದನ್ನು ಶರ್ಮರು ತಮ್ಮ ಬದುಕಿನಲ್ಲಿ ಪ್ರಕಾಶಪಡಿಸಿದರು.

ಎರಡನೆಯದಾಗಿ – ಭಕ್ತಿಯ ಒಂದು ಪ್ರಕಾರವಾದ 'ಆತ್ಮನಿವೇದನೆ'ಯನ್ನು ಅವರು ಡಿ.ವಿ.ಜಿ.ಯವರಿಗೆ ತಮ್ಮನ್ನು ತ್ರಿಕರಣಪೂರ್ವಕ ಸಮರ್ಪಿಸಿಕೊಂಡ ರೀತಿಯು ದೃಷ್ಟಾಂತಪಡಿಸಿತು.

ಮೂರನೆಯದಾಗಿ – ವೈಯಕ್ತಿಕ ನೆಲೆಯಲ್ಲಿ ಅವರು ಬೆಳೆಸಿಕೊಂಡಿದ್ದ ಚಿಂತನೆಯ ಮತ್ತು ವರ್ತನೆಯ ಉದಾರತೆ ತುಂಬಾ ಹೃದ್ಯವಾಗಿತ್ತು. ಅವರನ್ನು ನೋಡಲು ಬಂದ ಯಾರೂ ಏನಾದರೂ ಸತ್ಕಾರ ಪಡೆಯದೆ ತೆರಳುವುದು ಅಸಾಧ್ಯವಾಗಿತ್ತು. ಬೇರೆಯವರ ಅಲ್ಪ ಪ್ರಯತ್ನ ಕುರಿತೂ ಒಂದು ಪ್ರೋತ್ಸಾಹದ ಮಾತನ್ನು ಆಡಲು ಅವರು ಹಿಂದೆಗೆಯುತ್ತಿರಲಿಲ್ಲ.

ನಾಲ್ಕನೆಯದಾಗಿ – ಕಾರ್ಯಶ್ರದ್ಧೆ. ಸಣ್ಣದಾಗಲಿ ದೊಡ್ಡದಾಗಲಿ, ಒಪ್ಪಿಕೊಂಡ ಕೆಲಸವನ್ನು ದಕ್ಷವಾಗಿ ನಿಗದಿಯಾದಂತೆ ಮುಗಿಸಿ ಅನಂತರ ನಿರ್ಲಿಪ್ತರಾಗಿಬಿಡುತ್ತಿದ್ದರು. ಅವರ ಈ ಶಿಸ್ತೂ ಶ್ರಮವಂತಿಕೆಯೂ ತುಂಬಾ ವಿರಳ ರೀತಿಯದೆನಿಸುತ್ತಿತ್ತು.

ಯಾವುದಾದರೂ ಗ್ರಂಥಮೂಲವನ್ನು ಪುನಃ ಪ್ರಕಟಣೆಗಾಗಿ ಸಿದ್ಧಪಡಿಸಬೇಕಾದಾಗ, ಪರಿಷ್ಕರಣವು ತುಂಬಾ ಕ್ಲೇಶಕರವೆನಿಸಿದಾಗ ಕೆಲವೊಮ್ಮೆ ಆ ರಗಳೆಯಿಂದ ದೂರ ಸರಿಯೋಣವೆನಿಸುವುದು ವಿರಳವಲ್ಲ. ಮೊದಲಿಗೇ ಆ ಭಾರವನ್ನು ನಿವಾರಿಸಿಕೊಳ್ಳಲು ಸಾಧ್ಯವಿದ್ದರೆ ತೊಂದರೆಯಿಲ್ಲ. ಆದರೆ ಏನೋ ಕಾರಣಗಳಿಂದ ಅದಕ್ಕೆ ಒಮ್ಮೆ ಕೈಯಿರಿಸಿದ ಮೇಲೆ ಹಿಂದಿರುಗುವ ಪ್ರಶ್ನೆಯಿಲ್ಲ. ಅದೆಷ್ಟೇ ಕ್ಲೇಶಮಯವಾಗಿದ್ದರೂ ಶರ್ಮರು ಹಗಲುರಾತ್ರಿ ಕುಳಿತು ಶ್ರಮಪಟ್ಟು ಅದನ್ನು ಮುಗಿಸುತ್ತಿದ್ದರು. ಇಂತಹ ಒಂದು ಯೋಜನೆಯನ್ನು ದಡ ಕಾಣಿಸಲು ಶರ್ಮರು ಒಂದು ವರ್ಷವಿಡೀ ಶ್ರಮಪಡಬೇಕಾಯಿತು. ಆ ಯೋಜನೆಯಲ್ಲಿ ಸಹಕಾರಿಗಳೆಂದು ಇನ್ನೂ ಮೂರು–ನಾಲ್ಕು ಮಂದಿಯ ಹೆಸರುಗಳೇನೋ ಆ ಸಂರಚನೆಯಲ್ಲಿ ಇದ್ದವು. ಆದರೆ ಅದರ ಭಾರವಷ್ಟೂ ಬಿದ್ದದ್ದು ಶರ್ಮರ ಹೆಗಲ ಮೇಲೆಯೇ. ಏಕಾಂಗಿಯಾಗಿ ಅವರು ಆ ಕಷ್ಟದ ಕೆಲಸವನ್ನು ಮುಗಿಸಿದರು.

## ಬೋಧನೋತ್ಸಾಹ

ನಮಗೆಲ್ಲ ಅವರೊಡನೆ ಎಷ್ಟು ಸಲಿಗೆ ಬೆಳೆದುಬಿಟ್ಟಿತ್ತೆಂದರೆ – ಅವರ ಉನ್ನತಿಗೂ ನಮ್ಮ ಕೆಳಮಟ್ಟಕ್ಕೂ ನಡುವಣ ಅಂತರ ಮರೆತೇಹೋಗುತ್ತಿತ್ತು. 'ಲಘುಕೌಮುದೀ' ನಮಗೆ ಪಾಠ ಮಾಡುತ್ತಿದ್ದಾಗ ಅವರು ನಮ್ಮ ಮಟ್ಟಕ್ಕೆ ಇಳಿದು ಪ್ರಕ್ರಿಯೆಗಳನ್ನು ಮೇಲಿಂದ ಮೇಲೆ ವಿಶದಪಡಿಸುತ್ತಿದ್ದ ರೀತಿಯನ್ನು ನೆನೆದರೆ ಈಗಲೂ ಆಶ್ಚರ್ಯವಾಗುತ್ತದೆ.

ಪ್ರತಿ ವಾರ ನಾವು ಒಂದು ಶಬ್ದರೂಪ ಮತ್ತು ಎರಡು ಧಾತುರೂಪಗಳನ್ನು ಕಂಠಪಾಠ ಮಾಡಿ ಒಪ್ಪಿಸಬೇಕಾಗಿತ್ತು. ಒಂದು ತರಗತಿಯಲ್ಲಿ ನಮ್ಮ ಸಹಾಧ್ಯಾಯಿ ಟಿ. ಎಲ್. ರಂಗಸ್ವಾಮಿ "ಇವತ್ತು ಧಾತುರೂಪ ಮಾತ್ರ ಹೇಳಬಲ್ಲೆ" ಎಂದರು. ಪಂಡಿತರು "ಚಿಂತೆಯಿಲ್ಲ. ಅಷ್ಟನ್ನೇ ಹೇಳಿ. ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್" ಎಂದರು.

ಹೀಗೆ ನಮ್ಮ ಪಾಠದ ತರಗತಿಗಳು ಎಂದೂ ನೀರಸವಾಗಿರುತ್ತಿರಲಿಲ್ಲ.

ಒಮ್ಮೆ ನಮ್ಮ ತರಗತಿ ನಡೆದಿದ್ದಾಗ ಕಡೆಂಗೋಡ್ಲು ಶಂಕರಭಟ್ಟರು ಸಂಸ್ಥೆಗೆ ಬಂದರು. ಇಲ್ಲಿ ಪಾಠ ನಡೆಯುತ್ತಿದ್ದುದನ್ನು ನೋಡಿ ಅವರಿಗೆ ಅತ್ಯಂತ ಆನಂದವಾಯಿತು. "ಈ ನಗರದ ಗಡಿಬಿಡಿಗಳ ನಡುವೆ ಈ ಮೂಲೆಯಲ್ಲಿ ಇಂತಹ ಗುರುಕುಲವನ್ನು ನಾನು ನಿರೀಕ್ಷಿಸಿರಲಿಲ್ಲ" ಎಂದು ಹರ್ಷೋದ್ಗಾರ ಮಾಡಿದರು.

ಎಷ್ಟೋ ನಮೂನೆಯ ಪಂಡಿತರುಗಳನ್ನು ನಾವು ನೋಡಿದ್ದೆವು. ಉದಾಹರಣೆಗೆ – ಗೋಖಲೆ ಸಂಸ್ಥೆಗೆ ಸಮೀಪದಲ್ಲಿಯೆ ಒಬ್ಬ ದೊಡ್ಡ ಪಂಡಿತರಿದ್ದರು. ಪಾಠಪ್ರವಚನಗಳನ್ನು ನಡೆಸುತ್ತಿದ್ದರು. 'ಸಚ್ಛಾಸ್ತ್ರ ಪಾರಾವಾರೀಣ' ಎಂದೋ ಏನೋ ಛತ್ವಸಂಧಿಯುಕ್ತವಾದ ಬಿರುದೂ ಅವರಿಗೆ ಇತ್ತು. ಅವರು ನೀಡುತ್ತಿದ್ದ ಮೊದಲ ಆದೇಶ – 'ಪ್ರಶ್ನಾ ಮಾಡೋಣ ಕೂಡದು' ಎಂದು.

ಆದರೆ ಶರ್ಮರ ಪರಿಚಯವಾದಾಗ ದೊಡ್ಡ ಪಂಡಿತರೂ ಇಷ್ಟು ಸರಳರೂ ಸುಲಭರೂ ಆಗಿರಬಹುದೆನಿಸಿ ನಮಗೆ ಆಶ್ಚರ್ಯವಾಯಿತು. ಅಲ್ಪಕಾಲದಲ್ಲಿ ಅವರೊಡನೆ ಎಷ್ಟು ನಿಕಟತೆ ಬೆಳೆದುಬಿಟ್ಟಿತೆಂದರೆ – 'ಅಷ್ಟು ದೊಡ್ಡವರ ಹತ್ತಿರ ನಾವು ತುಂಬಾ ಸಲಿಗೆಯನ್ನು ವಹಿಸುತ್ತಿದ್ದೆವೇನೊ' ಎಂದು ಈಗ ಅನಿಸುತ್ತದೆ. ಆದರೆ ಅವರು ಎಂದೂ ತಮ್ಮ ಔನ್ನತ್ಯವನ್ನು ಮುಂದೆಮಾಡಿ ವರ್ತಿಸಿದವರಲ್ಲ.

ಅಪರಿಚಿತರಿಗೆ ಅವರು ಶ್ರೀಮದ್‌ಗಾಂಭೀರ್ಯದ ವ್ಯಕ್ತಿ ಎಂದು ತೋರುತ್ತಿದ್ದರೋ ಏನೊ. ಆದರೆ ಸ್ವಲ್ಪ ಪರಿಚಯ ಬೆಳೆದೊಡನೆ ಎಲ್ಲ ಅಂತರವೂ ಮಾಯವಾಗಿ ಬಿಡುತ್ತಿತ್ತು.

ಆಗಾಗ ಅವರ ರಸಿಕತೆಯೂ ಹೊಮ್ಮುತ್ತಿತ್ತು. ಹೀಗೆ ಅವರ ಒಡನಾಟ ಬೆಳದಿಂಗಳಿನಂತೆ ಸ್ಪೃಹಣೀಯವಾಗಿರುತ್ತಿತ್ತು.

## ವಿನೋದಪ್ರಜ್ಞೆ

ಹೆಚ್ಚಿನ ಸಮಯ ಯಾವುದೋ ಶಾಸ್ತ್ರಜಟಿಲತೆಗಳನ್ನು ಬಿಡಿಸುವುದರಲ್ಲಿ ಪಂಡಿತರ ಮನಸ್ಸು ಕೆಲಸ ಮಾಡುತ್ತಿರುತ್ತಿತ್ತು. ಆದರೆ ವಿನೋದಪ್ರಜ್ಞೆಯೂ ಅವರಿಗೆ ಸ್ವಭಾವಗತವೇ. ಹಾಸ್ಯಾವಕಾಶವಿದ್ದಾಗ ತಾವು ಆನಂದಿಸಿ ಇತರರನ್ನೂ ರಂಜಿಸಬಲ್ಲವರಾಗಿದ್ದರು. ಒಂದೆರಡು ಪ್ರಸಂಗಗಳನ್ನು ಸ್ಮರಿಸಬಹುದು.

ಕೆಲವು ಸಮಯ ಅವರು ಗೋಖಲೆ ಸಂಸ್ಥೆಗೆ ನಾಲ್ಕು ರಸ್ತೆಯ ಆಚೆಯೇ ಔಟ್‌ಹೌಸಿನಲ್ಲಿ ವಾಸವಿದ್ದರು. ಆ ದಿನಗಳಲ್ಲಿ ಒಮ್ಮೆ ಅವರ ಮನೆಯಲ್ಲಿ ಏನೋ ಹೋಮಕಲಾಪ, 'ಅಗ್ನಯೇ ಸ್ವಾಹಾ' ಎಂದೆಲ್ಲ ಆಹುತಿ ನಡೆದಿತ್ತು. ಆಗ ಶರ್ಮರ ಪುತ್ರ (ಬಹುಶಃ ನಾಲ್ಕು ವರ್ಷದವನಾಗಿದ್ದ) ನಾಗಭೂಷಣ 'ಅಜ್ಜಯೇ ಸ್ವಾಹಾ' ಎಂದೆಲ್ಲ ಮಿಮಿಕ್ರಿ ಮಾಡತೊಡಗಿದ.

ಪಂಡಿತರು ನಕ್ಕು "ಅಲ್ಲ, ಏನೋ ಬಾಯಿಗೆ ಬಂದದ್ದನ್ನು ಹೇಳುವಾಗಲೂ ಇವನ ಬಾಯಲ್ಲಿ ಚತುರ್ಥಿಯೇ ಬರುತ್ತಿದೆಯಲ್ಲ!' ಎಂದರು.

ಇಂತಹ ಸನ್ನಿವೇಶಗಳು ಹತ್ತಾರು.



ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥಶರ್ಮಾ
(1916 – 25.1.2014)

ಗೋಖಲೆ ಸಂಸ್ಥೆಯ ಎಲ್ಲ ಕಾರ್ಯಕ್ರಮಗಳಿಗೂ ಅವರು ತಪ್ಪದೆ ಬರುತ್ತಿದ್ದರು. ಹಾಗೆ ಬಂದಾಗ ಒಂದು ಸಂಜೆ ಅಲ್ಲಿ ಇದ್ದುದು ಒಂದು ಸಂಗೀತ ಕಾರ್ಯಕ್ರಮ.

ಗೇಟಿನ ಬಳಿ ಇದ್ದ ನನ್ನನ್ನು ಪಂಡಿತರು ಕೇಳಿದರು : "ಸಂಗೀತ–ಸಾಹಿತ್ಯಪರಿಜ್ಞಾನ ಇಲ್ಲದವರನ್ನು 'ಸಾಕ್ಷಾತ್ ಪಶುಃ ಪುಚ್ಛವಿಷಾಣಹೀನಃ' (ಕೊಂಬು–ಬಾಲ ಇಲ್ಲ ಎಂಬುದನ್ನು ಬಿಟ್ಟರೆ ದನಗಳಿಗೆ ಸಮಾನ) ಎನ್ನುತ್ತಾರಲ್ಲವೆ?"

"ಹೌದು, ನೀವೇ ನಮಗೆ ಪಾಠ ಮಾಡಿದ್ದೀರಲ್ಲ!"

"ಹಾಗಾದರೆ ಯಾರುಯಾರಿಗೆ ಸಂಗೀತ–ಸಾಹಿತ್ಯಗಳ ಪರಿಜ್ಞಾನ ಇರುತ್ತದೋ ಅವರು 'ಸಾಕ್ಷಾತ್ ಪಶುಃ ಪುಚ್ಛವಿಷಾಣಯುಕ್ತಃ' ಎಂದು ಹೇಳಬಹುದಲ್ಲವೆ?" – ಎಂದರು.

ಒಂದು ದಿನ ಅಪರಾಹ್ನ ಚಾಮರಾಜಪೇಟೆಯಲ್ಲಿ ಪಂಡಿತರು ನಾನಿದ್ದಲ್ಲಿಗೆ ಬಂದರು. ಅದು ಸುಡುಬೇಸಗೆಯ ಕಾಲ. ನಾನು ಸಹಜವಾಗಿ ಕೇಳಿದೆ : "ಏನು, ಇಷ್ಟು ಬಿಸಿಲಿನಲ್ಲಿ ಬಂದಿರಲ್ಲ?"

ಅವರು ಉತ್ತರಿಸಿದರು : "ನಾನೇನು ಬಿಸಿಲಿನಲ್ಲಿ ಬರಲಿಲ್ಲ. ನನ್ನ ಪಾಡಿಗೆ ನಾನು ಬಂದೆ. ನಾನು ಬರುವಾಗ ಬಿಸಿಲು ಇದೆ, ಅಷ್ಟೆ."

ಶರ್ಮರ ರಾಮಾಯಣದ ಒಂದು ಸಂಪುಟ ಹೊರಬಿದ್ದಾಗ ಅದರಲ್ಲಿ ಸಹಕರಿಸಿದ್ದ ನಾನು ಜ್ವರಗ್ರಸ್ತನಾಗಿ ಮಲಗಿದ್ದೆ. ಆದರೆ ಹೊಸ ಸಂಪುಟ ಹೇಗೆ ಬಂದಿದೆಯೋ ನೋಡಬೇಕೆಂಬ ತೀವ್ರ ಚಪಲ ನನ್ನದು. ಶರ್ಮರ ಹಸ್ತಾಕ್ಷರದೊಡನೆ ಪುಸ್ತಕವನ್ನು ತಂದುಕೊಡುವಂತೆ ಕೋರಿ ಮಿತ್ರರೊಬ್ಬರನ್ನು ಕಳಿಸಿದೆ. ಶರ್ಮರು ಪ್ರೀತಿಪೂರ್ವಕ ನನಗೆ ಕಳಿಸಿದ ಪುಸ್ತಕದಲ್ಲಿ ಹೀಗೆ ಅಂಕಿತ ಬರೆದಿದ್ದರು :

ಆಂಜನೇಯಸಮಾನೀತ–
ಮಣಿನಾ ಸಹ ಸೀತಯಾ
ದೂರಸ್ಥಯಾ ಸಮಾಶ್ಲಿಷ್ಟೋ
ರಾಮಃ ಸ್ವಾಮೀ ಮುದೇಽಸ್ತು ವಃ ॥

ಇನ್ನೊಂದು ಸಂದರ್ಭ ನೆನಪಾಗುತ್ತದೆ. ನಮ್ಮ ನಡುವೆ ಒಬ್ಬ ಅತ್ಯಂತ ಪ್ರಸಿದ್ಧ ಆಯುರ್ವೇದವೈದ್ಯರು ಇದ್ದರು. ಅವರ ಆಯುರ್ವೇದತಜ್ಞತೆ ವಿವಾದಾತೀತವಾಗಿತ್ತು. ಆದರೆ ಅವರಲ್ಲಿ ಒಂದು ಸ್ವಭಾವವೈಚಿತ್ರ್ಯ ಇದ್ದಿತು. ರೋಗಿಗಳಿಗೂ ಅನ್ಯರಿಗೂ ಬಾಯಿಬಡಿದು ವಾಗ್ದಂಡನೆ ಮಾಡುವುದರಲ್ಲಿ ಅವರಿಗೆ ವಿಲಕ್ಷಣ ಆನಂದ. ಯಾರಾದರೂ ಸ್ವಾಸ್ಥ್ಯಕ್ಕಾಗಿ ಯೋಗಾಸನ ಮಾಡುತ್ತಿರುವೆನೆಂದರೆ "ಇದನ್ನೆಲ್ಲ ಯೋಗವೆಂದು ಕರೆದವನು ಯಾವ ಮುಠ್ಠಾಳ?" ಎಂದು ವಾದಕ್ಕಿಳಿಯುವರು.

ರೋಗಿಗೆ ಮಜ್ಜಿಗೆ ಪಥ್ಯ ಹೇಳಿದರೆ ಹಿಂದುಗೂಡಿ "ಮಜ್ಜಿಗೆ ಎಂದರೆ ಏನೆಂದು ನಿಮಗೆ ಗೊತ್ತುಂಟೊ?" ಎಂದು ಉಪನ್ಯಾಸಕ್ಕೆ ತೊಡಗುವರು.

ಒಮ್ಮೆ ವೈದ್ಯರತ್ನರು ಇಂತಹ ಶಾಬ್ದಿಕಲೀಲೆಯಲ್ಲಿ ತೊಡಗಿದ್ದಾಗ ಅಲ್ಲಿ ಚಿಕಿತ್ಸೆಯ ನಿಮಿತ್ತ ಹೋದ ಶರ್ಮರು ಅವರಿಗೆ ಅವರದೇ ಮಾಧ್ಯಮದಲ್ಲಿ ಪ್ರಹಾರ ಮಾಡಿದರು:

"ಅಲ್ಲ ಪಂಡಿತರೇ, ಜಗತ್ತಿನಲ್ಲಿ ಎಲ್ಲರೂ ಮಾತುಗಳನ್ನು ಬಳಸುವುದು ಅವುಗಳು ರೂಢಿಯಲ್ಲಿ ಪಡೆದುಕೊಂಡಿರುವ ಅರ್ಥದಲ್ಲಿಯೇ. ಎಲ್ಲರೂ ಸದಾ ತರ್ಕಪರಿಷ್ಕಾರಸಮನ್ವಿತವಾಗಿ ಮಾತನಾಡುತ್ತೇವೆ ಎಂದು ವ್ರತ ತೊಟ್ಟರೆ ಜಗತ್ತಿನ ವ್ಯವಹಾರವೇ ಅಸಾಧ್ಯವಾಗುತ್ತದೆ. ನೀವು ನಿಮ್ಮ ದರ್ಜಿಯವನ ಹತ್ತಿರ ಹೋದಾಗ 'ಒಂದು ಷರಟು ಹೊಲಿದುಕೊಡು' ಎಂದು ತಾನೆ ಕೇಳುತ್ತೀರಿ? ಆದರೆ ಸಿದ್ಧವಾಗುವುದಕ್ಕೆ ಪೂರ್ವದ ಹಂತದಲ್ಲಿಯೆ ಅದನ್ನು 'ಷರಟು' ಎಂದು ನೀವು ಹೇಗೆ ನಿರ್ದೇಶಿಸುತ್ತೀರಿ? ಅಥವಾ ನೀವೇನಾದರೂ 'ಈ ದಾರಗಳ ಸಮೂಹವನ್ನು ಒಂದು ಆಚ್ಛಾದನಾರ್ಹ ವಸ್ತುವಿಶೇಷವನ್ನಾಗಿ ಪರಿವರ್ತಿಸಿಕೊಡು' ಎಂದು ಕೇಳುತ್ತೀರೋ? ಸುಮ್ಮನೆ ನಿಷ್ಕಾರಣವಾಗಿ ನೀವು ಏಕೆ ಜನರ ಬಾಯಿಬಡಿಯುತ್ತೀರಿ?"

ಆಯುರ್ವೇದ ಪಂಡಿತರು ನಕ್ಕು ಸುಮ್ಮನಾದರು. ಸೇರಿಗೆ ಸವ್ವಾಸೇರು ಎಂಬಂತೆ ಆಗಿತ್ತು.

ಒಬ್ಬ ಪ್ರವಚನಕಾರರಿಗೆ ಎಲ್ಲೆಲ್ಲಿಂದಲೋ ಏನೇನೋ ಬಿರುದುಗಳನ್ನು ಸಂಗ್ರಹಿಸಿಕೊಳ್ಳುವ ಚಟ; ಮತ್ತು ಅವನ್ನು ತಮ್ಮ ಪ್ರಕಟಣೆಗಳಲ್ಲಿ ತಪಶೀಲಾಗಿ ತಪ್ಪದೆ ಒಂದರ ಕೆಳಗೆ ಒಂದನ್ನು ಸಾಲಾಗಿ ಮುದ್ರಿಸುತ್ತಾರೆ. ಅಂತಹ ಒಂದು ಶಾಸನವನ್ನು ಕುರಿತು ಶರ್ಮರು ರಾ. ಗಣೇಶ್‌ರವರಿಗೆ ಫೋನ್ ಮಾಡಿದರು : "ಈ ಮನುಷ್ಯ ಇದುವರೆಗೆ ಎಷ್ಟು ಬಿರುದುಗಳನ್ನು ಒಟ್ಟುಹಾಕಿಕೊಂಡಿದ್ದಾನೆಂದು ಗಮನಿಸಿದ್ದೀರೇನ್ರೀ?" – ಎಂದು. ಗಣೇಶ್ "ನೋಡಿದ್ದೇನೆ, ಒಟ್ಟು ಇಪ್ಪತ್ತೆಂಟು ಇವೆ" ಎಂದರು. ಶರ್ಮರು "ನಿಮ್ಮ ಲೆಕ್ಕ ತಪ್ಪು. ಒಟ್ಟು ಇಪ್ಪತ್ತೊಂಬತ್ತು ಇವೆ, ಸರಿಯಾಗಿ ಎಣಿಸಿ ನೋಡಿರಿ" ಎಂದು ತಿದ್ದಿದರು.

2011ರಲ್ಲಿ ಪಂಡಿತರಿಗೆ ನಾನು ಬರೆದ 'ದೀಪ್ತಿಮಂತರು' ವ್ಯಕ್ತಿಚಿತ್ರಸಂಪುಟ ಪ್ರತಿಯನ್ನು ಕೊಡುವಾಗ ಅದರಲ್ಲಿ ಶರ್ಮರಿಗೂ ನನಗೂ ಇಬ್ಬರಿಗೂ ಆತ್ಮೀಯರಾಗಿದ್ದ ನಾಟ್ಯಾಚಾರ್ಯ ವಿ.ಎಸ್. ಕೌಶಿಕ್ ಅವರ ಬಗೆಗೆ ಬರೆದಿದ್ದೇನೆ ಎಂದು ಹೇಳಿದೆ. ಪಂಡಿತರು ನಕ್ಕು 'ಆತ ನನಗೆ ನಸ್ಯ ಕಲಿಸಿದ ಗುರು' ಎಂದರು.

ಇಳಿವಯಸ್ಸಿನಲ್ಲಿ ಇಂದ್ರಿಯಪಾಟವ ಕಡಮೆಯಾಗಿದ್ದುದೂ ಅವರಿಗೆ ವಿನೋದವಿಷಯವೇ ಆಗಿತ್ತು. 90ರ ವಯಸ್ಸಿನಲ್ಲಿ ಅವರು ಹೇಳುತ್ತಿದ್ದರು :

"ನನ್ನ ಕಣ್ಣು ಕಿವಿ ಮೊದಲಾದ ಇಂದ್ರಿಯಗಳು ನನಗೆ ಹೇಳುತ್ತಿವೆ – 'ನೀನೇನೊ ಮೂವತ್ತು ವರ್ಷ ಹಿಂದೆ ಕೆಲಸದಿಂದ ನಿವೃತ್ತನಾದೆ. ಆಮೇಲೆ ಮೂವತ್ತು ವರ್ಷವೂ ಸತತವಾಗಿ ನೀನು ನಮ್ಮನ್ನು ದುಡಿಸಿಕೊಂಡಿದ್ದೀ; ನಮಗೆ ವಿಶ್ರಾಂತಿ ಕೊಡುವ ಯೋಚನೆಯನ್ನೇ ಮಾಡಲಿಲ್ಲ. ಆದ್ದರಿಂದ ಈಗ ನಾವಾಗಿ ನಿನ್ನ ಸೇವೆಯಿಂದ ನಿವೃತ್ತರಾಗಲು ತೀರ್ಮಾನಿಸಿದ್ದೇವೆ' – ಎಂದು."

* * *

## ಶಾಸ್ತ್ರಸಾಹಿತ್ಯನಿರ್ಮಿತಿ

ಶರ್ಮರ ಸಾರಸ್ವತ ಕೊಡುಗೆ ಸಮೃದ್ಧವೂ ವೈವಿಧ್ಯಮಯವೂ ಆದದ್ದು. 'ಶ್ರೀಶಂಕರಚರಿತಾಮೃತಮ್', 'ಗುರುಪರಂಪರಾಚರಿತಮ್', 'ಬಾಹುಬಲಿವಿಜಯಮ್', 'ಏಕಚಕ್ರಮ್' ಸೇರಿದಂತೆ 11 ಸಂಸ್ಕೃತ ಕೃತಿಗಳು; 'ಲೌಕಿಕ ನ್ಯಾಯಗಳು', 'ಶ್ರೀರಾಮಕಥಾ ಮಂಜರಿ', 'ವ್ಯಾಕರಣಶಾಸ್ತ್ರದ ಪರಿವಾರ' ಸೇರಿದಂತೆ 20ಕ್ಕೂ ಹೆಚ್ಚು ಕನ್ನಡ ಕೃತಿಗಳು; 'ಭಗವನ್ನಾಮಾವಳಿ' ಮೊದಲಾದ ಐದಾರು ಸಂಕಲನಗಳು; – ಇವು ಶರ್ಮರ ಕೃತಿಗಳಲ್ಲಿ ಸೇರಿವೆ. ಶರ್ಮರ ಸ್ಥಾಯಿಯಾದ ಕೀರ್ತಿಯ ನಿಲವುಗಂಬಗಳು ಅವರ ಅನುವಾದ ಮತ್ತು ವ್ಯಾಖ್ಯಾನಕೃತಿಗಳು; 'ಶ್ರೀಮದ್ವಾಲ್ಮೀಕಿರಾಮಾಯಣ', 'ಶ್ರೀಮದ್ಭಾಗವತ', 'ವಿಷ್ಣುಪುರಾಣ', 'ಶಂಕರದಿಗ್ವಿಜಯ', 'ಮಾಂಡೂಕ್ಯಪ್ರವಚನ', 'ತೈತ್ತಿರೀಯೋಪನಿಷತ್‌ಪ್ರವಚನ', 'ಪಂಚದಶೀಪ್ರವಚನ', 'ಅಮರಕೋಶ', 'ವಾಕ್ಯಪದೀಯ', 'ಶ್ರೀಶಾಂಕರಸೂಕ್ತಿಮುಕ್ತಾವಳಿ', 'ಶ್ರುತಿಸಾರಸಮುದ್ಧರಣ' ಮೊದಲಾದ ಉದ್ಘಕೃತಿಗಳು. ಈ ಒಂದೊಂದೂ ಸಮುನ್ನತ ಕೃತಿಯೆಂದು ಪರಿಗಣಿಸಲು ಅರ್ಹವಾದುದು.

ಹೆಸರಿಗೆ ಮತ್ತು ವರ್ಗೀಕರಣದ ದೃಷ್ಟಿಯಿಂದ ಇವನ್ನು 'ಅನುವಾದಕೃತಿ'ಗಳೆಂದು ಕರೆಯಬಹುದಾದರೂ, ಅವುಗಳಲ್ಲಿ ಉದ್ದಕ್ಕೂ ನಿವೇಶಗೊಂಡಿರುವ ಅರ್ಥಸೂಕ್ಷ್ಮತೆಗಳನ್ನು ಗಮನಿಸಿದಲ್ಲಿ ಅವನ್ನು ಪ್ರೌಢ ಮತ್ತು ಸ್ವೋಪಜ್ಞ ವ್ಯಾಖ್ಯಾನಗಳು ಎನ್ನುವುದೇ ಸಮಂಜಸವಾಗುತ್ತದೆ. ಅರ್ಥ, ತಾತ್ಪರ್ಯ, ಟಿಪ್ಪಣಿಗಳೊಂದೊಂದರ ಹಿಂದೆಯೂ ಗಾಢ ಮಂಥನದಿಂದ ನಿಷ್ಪಾದಿತವಾದ ಮತ್ತು ಅನ್ಯತ್ರ ದುರ್ಲಭವಾದ ಸ್ಫುಟೀಕರಣವನ್ನು ಗುರುತಿಸಬಹುದು. ತೈತ್ತಿರೀಯ–ಮಾಂಡೂಕ್ಯ–ಪಂಚದಶೀಪ್ರವಚನಗಳಂತೂ ಸ್ವರೂಪದಲ್ಲಿಯೆ ವ್ಯಾಖ್ಯಾನಗಳಾಗಿವೆ. ಪದಚ್ಛೇದ, ಪದಾರ್ಥೋಕ್ತಿ, ವಿಗ್ರಹ, ವಾಕ್ಯಯೋಜನೆ, ಆಕ್ಷೇಪಕ್ಕೆ ಸಮಾಧಾನ – ಈ ಐದು ಲಾಕ್ಷಣಿಕತೆಗಳ ಮೇಲ್ಮಟ್ಟದ ಅನುಸರಣೆಯ ಜೊತೆಗೆ ದಟ್ಟವಾದ ಅನುಭವದಿಂದ ಜನ್ಯವಾದ ಒಳನೋಟಗಳ ನಿಬಿಡತೆ ಇವುಗಳಲ್ಲಿ ದೃಶ್ಯಮಾನವಾಗಿದೆ. ಇಂತಹ ವೈಶದ್ಯದ್ಯೋತನಕ್ಕೆ ಮುಕುಟಪ್ರಾಯವಾಗಿ ಚಾರಿತ್ರಾಂಶಗಳ ಮತ್ತು ವಿಷಯನಿಷ್ಠವಾದ ಪರಾಮರ್ಶನೆಯನ್ನೊಳಗೊಂಡ

ಸಂಶೋಧನಾಧಾರಿತ ಪ್ರಸ್ತಾವನೆಗಳನ್ನೂ ಶರ್ಮರು ನೀಡಿದ್ದಾರೆ. ಈ ಮೂರೇ 'ಪ್ರವಚನ' ಗ್ರಂಥಗಳನ್ನು ಅವಧಾನಪೂರ್ವಕ ಓದಿದಲ್ಲಿ ವೇದಾಂತದರ್ಶನದ ಪ್ರಮುಖ ಪ್ರಮೇಯಗಳ ಪರಿಜ್ಞಾನ ದೊರೆಯಬಲ್ಲದೆಂಬುದು ನಿಸ್ಸಂಶಯ. ಶಾಸ್ತ್ರಾಭ್ಯಾಸಿಗಳಿಗೂ ಸುಕರವಲ್ಲದ ಭರ್ತೃಹರಿಕರ್ತೃಕ 'ವಾಕ್ಯಪದೀಯ'ದ ವಿವರಣಾತ್ಮಕ ಭಾಷಾಂತರವಂತೂ ಶಬ್ದಶಾಸ್ತ್ರದ ಅವಗಾಹನೆಗೆ ನಮ್ಮ ಕಾಲದ ಶ್ರೇಷ್ಠ ಸೇರ್ಪಡೆ. ಅದರದೇ ಅಂಗವಾದ ಆದರೆ ತಾತ್ತ್ವಿಕವಾಗಿ ಹೆಚ್ಚಿನ ವ್ಯಾಪ್ತಿಯದಾದ 'ಕಾಲ ಮತ್ತು ಕ್ರಿಯೆ' ಅನುವಾದ–ವ್ಯಾಖ್ಯಾನವಂತೂ ಅನನ್ಯ ದಾರ್ಶನಿಕ ವಿಶ್ಲೇಷಣೆಯಾಗಿದೆ.

ವಿದ್ವದ್ವಲಯಗಳಲ್ಲಿಯೂ ಹೆಚ್ಚು ಪರಿಚಿತವಿರದ ಹದಿನೆಂಟನೇ ಶತಮಾನದ ಅಯ್ಯಣ್ಣದೀಕ್ಷಿತರೆಂಬವರ 'ವ್ಯಾಸತಾತ್ಪರ್ಯನಿರ್ಣಯ' ಎಂಬ ಅದ್ವೈತಮತ ಸಮರ್ಥಕವಾದ ಶಾಸ್ತ್ರಗ್ರಂಥವನ್ನು ಪಂಡಿತರು ಕನ್ನಡಕ್ಕೆ ಅನುವಾದಿಸಿ ಒದಗಿಸಿದ್ದಾರೆ. ಪಂಡಿತರ ಈ ಮತ್ತು ಇತರ ಬರಹಗಳು ವೇದಾಂತದರ್ಶನದಲ್ಲಿ ಉನ್ನತಮಟ್ಟದ ಅಧಿಕಾರವನ್ನು ಪಡೆದಿರುವವರಿಂದ ಮಾತ್ರ ಶಕ್ಯವಾಗುವಂತಹವು.

ವೇದಾಂತಶಾಸ್ತ್ರದಲ್ಲಿ ಮಾತ್ರವಲ್ಲದೆ ಅನುಭಾವಿ ಪರಂಪರೆಯ ಉನ್ನತಸಾಧಕರ ಬಗೆಗೂ ಅಪಾರ ಪೂಜ್ಯಭಾವವನ್ನು ಇರಿಸಿಕೊಂಡಿದ್ದ ಶರ್ಮರು ಹುಬ್ಬಳ್ಳಿಯ ಸಿದ್ಧಾರೂಢರ ಮತ್ತು ವರದಹಳ್ಳಿ ಶ್ರೀಧರಸ್ವಾಮಿಗಳ ಜೀವನಚರಿತ್ರೆಗಳನ್ನು ಶ್ರದ್ಧೆಯಿಂದ ರಚಿಸಿರುವುದು ಒಂದು ಅತ್ಯಂತ ಹೃದ್ಯ ಕೈಂಕರ್ಯವಾಗಿದೆ.

## ಬರವಣಿಗೆಯ ಸೊಬಗು

ವಿದ್ವತ್ತು, ವೇದಿಕೆಯಿಂದ ಪ್ರಭಾವೀ ಮಂಡನೆ, ಗ್ರಾಹ್ಯರೀತಿಯ ಬರವಣಿಗೆ – ಈ ಮೂರೂ ಸಿದ್ಧಿಗಳು ಸಾಂಪ್ರದಾಯಿಕ ಪಂಡಿತರಲ್ಲಿ ಏಕೀಭವಿಸಿರುವುದು ವಿರಳ. ಪ್ರವಚನ ಮಾಡುವವರೆಲ್ಲ ಒಳ್ಳೆಯ ಲೇಖಕರಾಗಿರಬೇಕೆಂದಿಲ್ಲ. ಅಂತೆಯೇ ಒಳ್ಳೆಯ ಬರಹ ಮಾಡುವ ಅನೇಕ ವಿದ್ವಾಂಸರಲ್ಲಿ ಶ್ರೋತೃಗಳಿಗೆ ಆಸ್ವಾದ್ಯವಾಗುವ ರೀತಿಯ ವಕ್ತೃತ್ವ ಇರುವುದಿಲ್ಲ. ಶರ್ಮರಾದರೋ ವ್ಯವಸ್ಥಿತವೂ ಪರಿಶುದ್ಧವೂ ಶಕ್ತಿಯುತವೂ ಆಕರ್ಷಕವೂ ಆದ ಲೇಖನಶೈಲಿಯನ್ನು ಶ್ರಮಪೂರ್ವಕ ಸಿದ್ಧಿಸಿಕೊಂಡಿದ್ದರು. ಅವರು ತಮ್ಮ ಅನುವಾದಗಳಲ್ಲಿಯೂ ಸ್ವತಂತ್ರ ಬರಹಗಳಲ್ಲಿಯೂ ಬಳಸಿರುವ ಭಾಷೆಯು ಶಿಷ್ಟ ಹೊಸಗನ್ನಡ ಹೇಗಿರಬೇಕೆಂಬುದಕ್ಕೆ ಮಾದರಿಯಂತಿದೆ.

1964–1974ರ ಅವಧಿಯಲ್ಲಿ ಡಿ.ವಿ.ಜಿ.ಯವರಿಂದ ಪ್ರೇರಿತರಾಗಿ ಶರ್ಮರು ಮಾಡಿದ ವಾಲ್ಮೀಕಿರಾಮಾಯಣದ ಸಮಗ್ರ ಅನುವಾದವು ಒಂದು ದೃಷ್ಟಿಯಿಂದ ಕನ್ನಡ ವಾಚಕಲೋಕಕ್ಕೆ ಶರ್ಮರ ನಿಶಿತ ಪಾಂಡಿತ್ಯವನ್ನು ವ್ಯಾಪಕವಾಗಿ ಪರಿಚಯಿಸಿದ ಸಾಧನೆ. ಈಗಲೂ (2017) ಎಂದರೆ ಪ್ರಕಟಗೊಂಡ ಅರ್ಧ ಶತಮಾನದ ತರುವಾಯವೂ

ವಿಶಾಲ ಜನಪ್ರಿಯತೆಯನ್ನು ಈ ಅನುವಾದಸಂಪುಟಗಳು ಉಳಿಸಿಕೊಂಡಿವೆಯೆಂಬುದು ಅವುಗಳ ಮೇಲ್ಮಟ್ಟವನ್ನು ತೋರಿಸುತ್ತದೆ. ಅದಕ್ಕೆ ಮುಂಚೆಯೂ ಅದು ಪ್ರಕಟಗೊಂಡ ತರುವಾಯವೂ ಒಂದೆರಡು ರಾಮಾಯಣಾನುವಾದಗಳು ಬಂದಿರುವವಾದರೂ ಈಗಲೂ ಪರಿಷ್ಕೃತಿಯ ಮತ್ತು ಸೌಲಭ್ಯದ ದೃಷ್ಟಿಯಿಂದ ಶರ್ಮರ ಅನುವಾದಸಂಪುಟಗಳು ತುಂಬಾ ಆದರಣೀಯವೆನಿಸಿವೆ.

ಈ ಬೃಹದ್ಯೋಜನೆಯ ಜನಕರು ಡಿ.ವಿ.ಜಿ. ಈ ಅನುವಾದವನ್ನು ಕೈಗೊಳ್ಳುವಂತೆ ಶರ್ಮರವರನ್ನು ತೊಡಗಿಸಿದವರು ಡಿ.ವಿ.ಜಿ.; ನರಸಿಂಹರಾಜ ಕಾಲೊನಿ ಶ್ರೀರಾಮಮಂದಿರಂ ಅಸೋಸಿಯೆಷನ್ ಸಂಸ್ಥೆಯ ಮೂಲಕ ಗ್ರಂಥಸರಣಿಯ ಪ್ರಕಾಶನಕ್ಕೆ ವ್ಯವಸ್ಥೆ ಮಾಡಿದವರೂ ಡಿ.ವಿ.ಜಿ.ಯವರೇ. ಪ್ರಕಟಣ ಯೋಜನೆಯ ಆರಂಭದಿಂದ ಅಂತ್ಯದವರೆಗೆ ಪ್ರಗತಿಯನ್ನು ಗಮನಿಸುತ್ತ ಆಗಿಂದಾಗ ಅವಶ್ಯ ಮಾರ್ಗದರ್ಶನ ಮಾಡುತ್ತಿದ್ದವರು ಡಿ.ವಿ.ಜಿ. ಆ ವೇಳೆಗೇ ವಯಸ್ಸು ಹತ್ತಿರಹತ್ತಿರ ಎಂಬತ್ತು ಆಗಿದ್ದರೂ ಡಿ.ವಿ.ಜಿ. ಶರ್ಮರ ಪ್ರತಿ ಸಂಪುಟಕ್ಕೂ ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದುದು ಅವರ ಆಸಕ್ತಿಯ ತೀವ್ರತೆಗೂ ಶರ್ಮರಲ್ಲಿ ಅವರು ಇರಿಸಿದ್ದ ಪೂರ್ಣ ವಿಶ್ವಾಸಕ್ಕೂ ಶರ್ಮರು ಆ ಭರವಸೆಯನ್ನು ಅತ್ಯಂತ ಸಮರ್ಪಕವಾಗಿ ಈಡೇರಿಸಿದುದಕ್ಕೂ ಸಾಕ್ಷ್ಯವಾಗಿದೆ.

## ಸಮರ್ಪಣ ಮನೋಭಾವ

ಶರ್ಮರ ಶ್ರೀಮದ್‌ರಾಮಾಯಣಾನುವಾದ ಅಷ್ಟು ಕಾಂತಿಯುತವೂ ಜನಪ್ರಿಯವೂ ಆಗಿರುವುದಕ್ಕೆ ಮುಖ್ಯ ಕಾರಣವೆಂದರೆ ಅವರ ಬರಹವು ಕೇವಲ ಶಬ್ದಾಧಾರಿತವಾಗಿರದೆ ಗಾಢ ಸ್ವತಂತ್ರ ಚಿಂತನೆಯ ಮತ್ತು ಹಲವು ವ್ಯಾಖ್ಯಾನಗಳ ಅವಲೋಕನದ ಪಾಕವಾಗಿ ಹೊಮ್ಮಿರುವುದು.

ರಾಮಾಯಣವು ಶರ್ಮರ ಪಾಲಿಗೆ ಕೇವಲ ಒಂದು ಕಾವ್ಯಗ್ರಂಥವಾಗಿರಲಿಲ್ಲ; ಅವರ ಅಂತರಂಗವಷ್ಟನ್ನೂ ವ್ಯಾಪಿಸಿಬಿಟ್ಟಿತ್ತು. ಆ ದಿನಗಳಲ್ಲಿ ಅವರ ಸತತ ಸಂಪರ್ಕದಲ್ಲಿದ್ದ ನಾವು ಯಾರಾದರೂ ಭೇಟಿಯಾದರೆ ಅವರ ಮನಸ್ಸಿಗೆ ಹೊಸದಾಗಿ ಹೊಳೆದಿದ್ದ ಯಾವುದೊ ಶ್ಲೋಕಾರ್ಥಸ್ವಾರಸ್ಯಗಳನ್ನು ಹೇಳುತ್ತಿದ್ದರು.

ರಾಮಾಯಣದೊಡನೆ ಅವರ ತಾದಾತ್ಮ್ಯ ಎಷ್ಟುಮಟ್ಟಿಗೆ ಇದ್ದಿತೆಂದರೆ, ಉತ್ತರಕಾಂಡದ ಅನುವಾದ ಮುಗಿಸುವಾಗ “ಅಯ್ಯೋ, ನಾನು ಸೀತಾವಿಯೋಗವನ್ನು ನನ್ನ ಕೈಯಿಂದ ಮಾಡಿಸಿಬಿಟ್ಟೆನಲ್ಲ!” ಎಂದು ಆ ಘಟನೆಗೆ ತಾವೇ ಹೊಣೆಗಾರರೆಂಬಂತೆ ಪ್ರಲಾಪ ಮಾಡಿದರು.

ಶರ್ಮರ ಕಾರ್ಯಕ್ಷಮತೆ ಅಸಾಧಾರಣವಾಗಿತ್ತು. ರಾಮಾಯಣದ ಅನುವಾದ ಮಾಡುತ್ತಿದ್ದ ದಿನಗಳಲ್ಲಿ ಅವರಿಗೆ ಸಂಸ್ಕೃತ ಕಾಲೇಜಿನಲ್ಲಿ ಇದ್ದ ಹೊಣೆಗಾರಿಕೆಯೂ

ಗುರುತರವೇ ಆಗಿದ್ದಿತು. ಪ್ರತಿದಿನ ಕನಿಷ್ಠ ನಾಲ್ಕು ಗಂಟೆಗಳಷ್ಟು ಕಾಲ ಜಟಿಲ ಶಾಸ್ತ್ರಪಾಠ ಇರುತ್ತಿತ್ತು. ಈ ಬೋಧನಕಾರ್ಯವನ್ನು ಮುಗಿಸಿ ಉಳಿದ ಸಮಯದಲ್ಲಿ ಅನುವಾದಕಾರ್ಯ ಮಾಡಬೇಕಾಗಿತ್ತು.

* * *

ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ 28 ವರ್ಷಕಾಲ ಬೋಧಕರಾಗಿ ಸೇವೆ ಸಲ್ಲಿಸಿದ ಶರ್ಮರು ಪ್ರಾಥಮಿಕ ಹಂತದಿಂದ ಪ್ರೌಢ ಹಂತದ ವರೆಗೆ ವಿದ್ಯಾರ್ಥಿಗಳಿಗೆ ಕಲಿಸುವುದನ್ನು ಒಂದು ಪವಿತ್ರ ಯಜ್ಞವೆಂದೇ ಭಾವಿಸಿದ್ದವರು. ಅವರ ಬೋಧನೆ ಎಂದೂ ನಿಗದಿಯಾದ ಪಾಠ್ಯಕ್ರಮಕ್ಕೆ ಸೀಮಿತವಾಗಿರುತ್ತಿರಲಿಲ್ಲ. ಶಿಕ್ಷಾರ್ಥಿಗಳ ಜ್ಞಾನವನ್ನೂ ಕ್ಷಮತೆಯನ್ನೂ ಹೆಚ್ಚಿಸುವುದರಲ್ಲಿ ಶರ್ಮರದು ಅತುಲ್ಯ ನಿಷ್ಠೆ. ಅವರ ಬೋಧನಕ್ರಮದ ಸಮಗ್ರತೆಯನ್ನೂ ವ್ಯವಸ್ಥಿತತೆಯನ್ನೂ ಅವರ ಶಿಷ್ಯರಾಗಿದ್ದವರೆಲ್ಲ ಇಂದಿಗೂ ನೆನೆಯುತ್ತಾರೆ. ಬೋಧನದಲ್ಲಾಗಲಿ ಪರೀಕ್ಷಣೆಯಲ್ಲಾಗಲಿ ಮೌಲ್ಯಮಾಪನದಲ್ಲಾಗಲಿ ಅವರು ನಿಯತಿಯನ್ನು ಎಂದೂ ಶಿಥಿಲಗೊಳಿಸಿದವರಲ್ಲ. ಉದಾರತೆಯೂ ನಿಯಮಬದ್ಧತೆಯೂ ಅವರಲ್ಲಿ ಅಪೂರ್ವ ರೀತಿಯಲ್ಲಿ ಸಮನ್ವಿತವಾಗಿದ್ದವು.

## ಐಕಾತ್ಮ್ಯ

ವಿದ್ವತ್ ಪದವಿಯಲ್ಲಿ ಉತ್ತೀರ್ಣರಾಗಿ ತೆರಳಿದ ತರುಣರ ಜೀವನಪ್ರಗತಿಯ ಬಗೆಗೂ ಶರ್ಮರು ನಿರಂತರ ಆಸಕ್ತಿ ವಹಿಸಿ ಪರಿಚಿತರ ಮೂಲಕವೂ ಪತ್ರವ್ಯವಹಾರದ ಮೂಲಕವೂ ಅವರ ಬಗೆಗೆ ತಿಳಿದುಕೊಳ್ಳುವುದರಲ್ಲಿ ಸದಾ ಆಸ್ಥೆ ತಳೆಯುತ್ತಿದ್ದರು.

ಇದೇ ಸಂದರ್ಭದಲ್ಲಿ ನೆನೆಯಬೇಕಾದ ಶರ್ಮರ ಒಂದು ಅಪೂರ್ವ ಗುಣ ವೆಂದರೆ ಪತ್ರಗಳನ್ನು ಬರೆಯುವುದರಲ್ಲಿ ಅವರು ತೋರುತ್ತಿದ್ದ ಶ್ರದ್ಧೆ. ಈಗೀಗ ಇಡೀ ಸಮಾಜದಲ್ಲಿ ಪತ್ರಲೇಖನದ ಅಭ್ಯಾಸವೇ ಬಹುಮಟ್ಟಿಗೆ ತಪ್ಪಿಹೋಗಿದೆ. ಗಣಕಯಂತ್ರಗಳು ಪ್ರಚುರಗೊಂಡ ಮೇಲಂತೂ ಹೆಚ್ಚಿನ ಸಂದರ್ಭಗಳಿಗೆ ಟೆಲಿಗ್ರಾಫಿಕ್ ರೀತಿಯ ಸಂವಹನವೇ ಪರ್ಯಾಪ್ತವೆನಿಸಿದೆ. ಶರ್ಮರಾದರೋ ಯಾವುದೋ ಪ್ರಸಕ್ತ ವಿಷಯದ ಬಗೆಗೆ ಅಭಿಪ್ರಾಯ ತಿಳಿಸುವ ಅಥವಾ ಯಾವುದೋ ಮಾಹಿತಿಯನ್ನು ಪಡೆಯುವ ಸಂದರ್ಭವಿದ್ದಾಗ ತಪ್ಪದೆ ಪತ್ರ ಬರೆಯುತ್ತಿದ್ದರು. ದೂರವಾಣಿಯ ಮೂಲಕ ನಿರ್ವಾಹ ಮಾಡುವ ಸಾಧ್ಯತೆ ಇದ್ದಾಗಲೂ ಅವರು ಪತ್ರಗಳನ್ನೇ ಬರೆಯುತ್ತಿದ್ದರು. ದೂರವಾಣಿ ಅವರಿಗೆ ಕಟ್ಟಕಡೆಯ ಪರ್ಯಾಯವಾಗಿತ್ತು.

ಶರ್ಮರ ಪತ್ರಗಳ ಅಚ್ಚುಕಟ್ಟನ್ನೂ ಮಾಧುರ್ಯವನ್ನೂ ಎಷ್ಟು ಹೊಗಳಿದರೂ ಕಡಮೆಯೇ. ಅವು ಸದಾ ಸಂಗ್ರಹಯೋಗ್ಯವಾಗಿರುತ್ತಿದ್ದವು.

ಯಾವುದಾದರೂ ಸ್ಪಷ್ಟೀಕರಣವನ್ನೋ ಶಾಸ್ತ್ರವಿವರವನ್ನೋ (ಇದು ವ್ಯಾಕರಣಶಾಸ್ತ್ರಕ್ಕೇ ಸಂಬಂಧಿಸಿರಬೇಕಾಗಿರಲಿಲ್ಲ, ಯಾವುದೇ ವಿಷಯ ಆಗಬಹುದಿತ್ತು) ಕೋರಿ ಶರ್ಮರಿಗೆ ಊರೂರುಗಳಿಂದ ಪತ್ರಗಳು ಆಗಾಗ ಬರುತ್ತಿದ್ದವು. ಅಂತಹ ಪತ್ರಗಳಿಗೆ ತಪ್ಪದೆ ಅತಿ ಶೀಘ್ರವಾಗಿ ಶರ್ಮರು ಉತ್ತರಿಸುತ್ತಿದ್ದರು. (ಶರ್ಮರು ಅತ್ಯಂತವಾಗಿ ಗೌರವಿಸಿದ್ದ ಡಿ.ವಿ.ಜಿ.ಯವರೂ ವರ್ಷಗಳುದ್ದಕ್ಕೂ ಈ ವ್ರತವನ್ನು ಪಾಲಿಸಿದರು.)

ಇತರರಿಗೆ ಪ್ರಶಂಸೆ ಸಲ್ಲಿಸುವುದರಲ್ಲಿ ಶರ್ಮರು ಸದಾ ಉತ್ಸಾಹಿಗಳಾಗುತ್ತಿದ್ದರು. ಸಾಮಾನ್ಯವಾಗಿ ನಮ್ಮಲ್ಲಿ ಹೆಚ್ಚಿನವರು ಯಾವುದೋ ಬರಹ ನಮಗೆ ಮೆಚ್ಚಿಕೆಯಾದರೂ ಅದನ್ನು ಸಂಬಂಧಪಟ್ಟವರಿಗೆ ತಿಳಿಸುವ ಗೋಜಿಗೆ ಹೋಗುವುದಿಲ್ಲ; ಓದಿ ಸುಮ್ಮನಾಗುತ್ತೇವೆ. ಆದರೆ ಶರ್ಮರು ಇಂತಹ ಸಂದರ್ಭಗಳಲ್ಲಿ ತಮ್ಮ ಮೆಚ್ಚಿಕೆಯನ್ನು ಪತ್ರದ ಮೂಲಕವೋ ದೂರವಾಣಿಯ ಮೂಲಕವೋ ತಪ್ಪದೆ ತಿಳಿಸುತ್ತಿದ್ದರು. ಲೇಖಕರು ಬೇರೆ ಊರಿನವರಾದರೆ ವಿಳಾಸವನ್ನು ಇತರರಿಂದ ಕೇಳಿ ಪಡೆದು ಆ ಲೇಖಕರಿಗೆ ಪತ್ರ ಬರೆಯುತ್ತಿದ್ದರು. ವಯಸ್ಸು 80 ದಾಟಿದ ಮೇಲೂ ಅವರ ಈ ಶಿಸ್ತು ಮುಂದುವರಿದಿತ್ತು.

ಇದನ್ನೆಲ್ಲ ನೆನೆಯುವಾಗ ಎಂತಹ ಅಪೂರ್ವ ವ್ಯಕ್ತಿಯ ಒಡನಾಟವನ್ನು ದೈವವು ನಮಗೆ ಕಲ್ಪಿಸಿಕೊಟ್ಟಿತ್ತೆಂಬುದು ಮೇಲಿಂದ ಮೇಲೆ ನೆನಪಿಗೆ ಬರುತ್ತಿರುತ್ತದೆ.

ಸಮಾಜದೊಡನೆ ಐಕಾತ್ಮ್ಯ ತಳೆದಿದ್ದುದರಿಂದ ಶರ್ಮರಿಗೆ ಇಂತಹ ನಡವಳಿಗಳು ಸ್ವಭಾವಸಹಜವಾಗಿದ್ದವು.

## ಅನುಕಂಪಾರ್ದ್ರತೆ

ಅವರು ನನ್ನನ್ನು 'ವೈವಾ ವೋಸೆ'ಗೆ ಒಳಪಡಿಸಿದ ಒಂದು ಸಂದರ್ಭವನ್ನು ಹೇಳಬೇಕು. ಅವರಲ್ಲಿ ಇತರರ ಬಗೆಗೆ ಎಷ್ಟು ಅನುಕಂಪವೂ ಹಿತಚಿಂತನೆಯೂ ತುಂಬಿದ್ದಿತು ಎಂಬುದನ್ನು ದ್ಯೋತಮಾಡುವ ಕಾರಣದಿಂದ ಇದನ್ನು ಪ್ರಸ್ತಾವಿಸುತ್ತಿದ್ದೇನೆ.

ಒಮ್ಮೆ ನನ್ನಲ್ಲಿ ಮಾತನಾಡುವುದಿದೆಯೆಂದು ಫೋನ್ ಮಾಡಿದರು. ನಾನು ಹೋದಾಗ ಅವರು ಹೇಳಿದ್ದು ಹೀಗೆ :

"ಈಗ ಸಂಸ್ಥೆಯ ಜವಾಬ್ದಾರಿ ನಿನ್ನ ಮೇಲಿದೆ. ಆದ್ದರಿಂದ ವಿಚಾರಿಸಬೇಕೆನಿಸಿ ನಿನ್ನನ್ನು ಕರೆದೆ. ಸಂಸ್ಥೆಯಲ್ಲಿ ಆ ಹೆಣ್ಣುಮಕ್ಕಳೆಲ್ಲ ಪಾಪ ಹಗಲುರಾತ್ರಿ ಕೆಲಸ ಮಾಡುತ್ತಿದ್ದಾರಲ್ಲ – ಅವರಿಗೆಲ್ಲ ಯೋಗ್ಯವಾದ ಸಂಬಳ ಸಂದಾಯ ಆಗುತ್ತಿದೆ ತಾನೆ? ಗೊತ್ತಾದ ದಿನದಂದು ತಪ್ಪದೆ ಕೊಡುತ್ತಿದ್ದೀರಿ ತಾನೆ? ಅದು ವ್ಯತ್ಯಾಸವಾಗದ ಹಾಗೆ ಏರ್ಪಾಡುಗಳನ್ನು ಮಾಡಿಕೊಂಡಿದ್ದೀಯಾ?" ಎಂದು ಕೇಳಿದರು.






(ಕೆಳಗಿನ ಚಿತ್ರ) ವಿದ್ವಾನ್ ಎನ್. ರಂಗನಾಥಶರ್ಮಾ ಅವರಿಗೆ ಅಂಕಿತ ಮಾಡಿದ 'ಧ್ರುವಜಲ' ಕೃತಿಯ (ಲೇಖಕರು: ಎಸ್. ಆರ್. ರಾಮಸ್ವಾಮಿ) ಲೋಕಾರ್ಪಣ ಸಂದರ್ಭದಲ್ಲಿ ಮಾತನಾಡುತ್ತಿರುವ ರಂಗನಾಥಶರ್ಮಾ (31.12.2011).

(ಮೇಲಿನ ಚಿತ್ರ) ಅದೇ ಸಂದರ್ಭದಲ್ಲಿ ಕೃತಿಯ ಲೋಕಾರ್ಪಣ ಮಾಡಿದ ಡಾ॥ ಎಸ್. ಎಲ್. ಭೈರಪ್ಪ ಅವರೊಡನೆ ಸಂವಾದದಲ್ಲಿ ತೊಡಗಿರುವ ರಂಗನಾಥ ಶರ್ಮಾ.

ಹೆಚ್ಚಿನ ವ್ಯಾಖ್ಯಾನದ ಆವಶ್ಯಕತೆ ಇಲ್ಲ.

ಇಂತಹ ಪ್ರಶ್ನೆಯನ್ನು ಇಷ್ಟು ವರ್ಷಗಳಲ್ಲಿ ನನ್ನನ್ನು ಸಂಸ್ಥೆಯ ಯಾವ ಸದಸ್ಯರಾಗಲಿ ದಾನಿಗಳಾಗಲಿ ಇತರರಾಗಲಿ ಎಂದೂ ಕೇಳಿದ್ದಿಲ್ಲ.

ಇಂತಹ ಅನುಕಂಪ ಎಲ್ಲಿ ನೋಡಲು ಸಿಕ್ಕೀತು?

ಗೋಖಲೆ ಸಂಸ್ಥೆಯೊಡನೆ ಪಂಡಿತರಿಗೆ ಎಂತಹ ಪರಿಪೂರ್ಣ ತಾದಾತ್ಮ್ಯ ಬೆಳೆದಿತ್ತು ಎಂಬುದು ಅವಿಸ್ಮರಣೀಯ. ದಶಕಗಳುದ್ದಕ್ಕೂ ಅವರ ಆಶೀರ್ವಾದ ನಮ್ಮನ್ನು ಆವರಿಸಿದೆ.

ಒಂದು ಸಂಗತಿಯನ್ನು ಸ್ಮರಿಸಿದರೆ ಪರ್ಯಾಪ್ತವಾದೀತು. ಇಳಿವಯಸ್ಸಿನಲ್ಲಿ ಅವರು ವಸತಿಯನ್ನು ಮೈಸೂರಿಗೆ ಬದಲಾಯಿಸಬೇಕಾಯಿತು. ವ್ಯವಸ್ಥೆಗಳೆಲ್ಲ ಆದ ಮೇಲೆ ಅವರು ವಾಹನದಲ್ಲಿ ಹೊರಡುವಾಗ ದಾರಿಯಲ್ಲಿ ಸಂಸ್ಥೆಗೆ ಬಂದು ಅಲ್ಲಿ ಕೆಲವು ನಿಮಿಷ ಕಳೆದು ಹೇಳಿದರು :

"ಬಹುಶಃ ಈ ಪುಣ್ಯಕ್ಷೇತ್ರದ ದರ್ಶನ ನನಗೆ ಮತ್ತೆ ಆಗಲಾರದೇನೋ. ಹೀಗಾಗಿ ಇದೇ ನನಗೆ ಈ ಕ್ಷೇತ್ರದ ಕಡೆಯ ದರ್ಶನ ಆಗಬಹುದು. ನಿಮಗೆಲ್ಲ ಭಗವಂತನು ಒಳ್ಳೆಯದನ್ನು ಮಾಡಲಿ"

– ಎನ್ನುತ್ತ ಗದ್ಗದಿತರಾಗಿ ಕಾರನ್ನು ಹತ್ತಿದರು.

* * *

ಕೆಲಸದ ಶಿಸ್ತು ಎಂದರೆ ಏನೆಂಬುದನ್ನು ಶರ್ಮರ ವ್ಯವಹಾರದಲ್ಲಿ ಯಾರೂ ಕಾಣಬಹುದಿತ್ತು.

'ಉತ್ಥಾನ' ಪತ್ರಿಕೆಗೆ ಅವರು 25 ವರ್ಷಕಾಲ ಸತತವಾಗಿ 'ಸೂಕ್ತಿ–ವ್ಯಾಪ್ತಿ' ಅಂಕಣವನ್ನು ಬರೆದರು. ಅಷ್ಟು ವರ್ಷಗಳಲ್ಲಿ ಅವರ ಬರಹ ಒಂದೇ ಒಂದು ಸಲವೂ ತಡವಾಗಿ ತಲಪಿದುದಿಲ್ಲ. ಅವರು ಪ್ರವಾಸಗಳಲ್ಲಿ ಇದ್ದಾಗಲೂ ನಿರೀಕ್ಷಿತ ದಿನದಂದು ಅವರ ಬರಹವನ್ನೊಳಗೊಂಡ ಅಂಚೆಯ ಲಕೋಟೆ ನನ್ನ ಮೇಜಿನ ಮೇಲೆ ಹಾಜರಾಗುತ್ತಿತ್ತು.

## ಶೋಧಪ್ರಬಂಧಗಳು

ತಮ್ಮ ಸ್ವೀಯ ಕ್ಷೇತ್ರವಾದ ವ್ಯಾಕರಣಶಾಸ್ತ್ರ ಪ್ರಕ್ರಿಯೆಗಳನ್ನು ಕುರಿತು ಹಲವಾರು ಶೋಧಪ್ರಬಂಧಗಳನ್ನು ಶರ್ಮರು ರಚಿಸಿದರು.

ಕನ್ನಡ ವ್ಯಾಕರಣ ವಿಶ್ಲೇಷಣೆಯನ್ನೊಳಗೊಂಡ ಅವರ ಶಾಸ್ತ್ರೀಯ ಪ್ರಬಂಧಗಳು ಈ ಕ್ಷೇತ್ರಕ್ಕೆ ಪ್ರೌಢವಾದ ಕೊಡುಗೆಗಳಾಗಿವೆ. 'ಕಾರಕ' ಮತ್ತು 'ವಿಭಕ್ತಿ'ಗಳನ್ನು ಕುರಿತ

ಅವರ ವಿವೇಚನೆಯೇ ನೂರು ಪುಟಗಳಷ್ಟು ವಿಸ್ತಾರವಾಗಿದೆ. ಇದರಲ್ಲಿ ಹಾಗೂ 'ಪಂಚಮೀವಿಭಕ್ತಿ' ಮತ್ತು 'ಗಮಕಸಮಾಸ' ಪರಾಮರ್ಶನೆಗಳಲ್ಲಿ ಅವರ ಸಮುನ್ನತ ಶಾಸ್ತ್ರಾಧಿಕಾರ ವ್ಯಕ್ತಗೊಂಡಿದೆ.

ಕನ್ನಡ ವ್ಯಾಕರಣದ ಆಧಾರಭೂತ ಅಂಗಗಳನ್ನು ಕುರಿತ ಇಷ್ಟು ತಲಸ್ಪರ್ಶಿ ವಿವೇಚನೆ ಬಹುಶಃ ಇದುವರೆಗೆ ಬಂದಿರಲಿಲ್ಲ. ಈ ಪರಾಮರ್ಶನೆಗಳಲ್ಲಿ ಕನ್ನಡ ವ್ಯಾಕರಣಶಾಸ್ತ್ರದ ಪ್ರಕ್ರಿಯೆಗಳ ಸ್ವರೂಪವಲ್ಲದೆ ಕನ್ನಡಕ್ಕೇ ವಿಶಿಷ್ಟವಾದ ಆಡುಮಾತಿನ ವೈಶಿಷ್ಟ್ಯಗಳೂ ವ್ಯಾಖ್ಯಾನಗೊಂಡಿವೆ. ವಿಭಕ್ತಿಭೇದಗಳನ್ನು ಕನ್ನಡಭಾಷೆಯು ಹೇಗೆ ಅಳವಡಿಸಿಕೊಂಡಿದೆ ಎಂಬುದರ ಇಷ್ಟು ಆಮೂಲಾಗ್ರ ವಿಶ್ಲೇಷಣೆ ಹಿಂದೆ ನಡೆದಂತಿಲ್ಲ. ಬಹಳವೆಂದರೆ 'ಕನ್ನಡದಲ್ಲಿ ಇದು ರೂಢ ಪ್ರಯೋಗ' ಎಂದು ಲಾಕ್ಷಣಿಕಸಾಹಿತ್ಯ ಪರ್ಯವಸಿತವಾಗಿತ್ತು.

## ಬೌದ್ಧಿಕ ತೀಕ್ಷ್ಣತೆ

ಸೌಮ್ಯಸ್ವಭಾವದವರಾದರೂ ಶಾಸ್ತ್ರವನ್ನೋ ಶಿಷ್ಟತೆಯನ್ನೋ ಬೆಂಬಲಿಸಬೇಕಾದ ಸನ್ನಿವೇಶ ಎದುರಾದಾಗ ಶರ್ಮರವರು ಕ್ಷಾತ್ರವೃತ್ತಿಯನ್ನು ತೋರಲು ಹಿಂದೆಗೆದವರಲ್ಲ. ಇದು ಅವರ ಸಹಜಸ್ವಭಾವಕ್ಕೆ ಹೊರತಾದುದೆಂಬುದು ವಾಸ್ತವ. ಆದರೆ ವಿಕಟ ಸಂದರ್ಭಗಳು ಒದಗಿದಾಗ ಅವರ ಸತ್ಯನಿಷ್ಠೆಯು ಪ್ರಖರವಾಗಿ ಹೊಮ್ಮಿದುದೂ ಉಂಟು.

ಅಲಂಕಾರಶಾಸ್ತ್ರದ ಕೆಲವು ಮೂಲಪ್ರಕ್ರಿಯೆಗಳಿಗೆ ಸಂಬಂಧಿಸಿದ ಜಿಜ್ಞಾಸೆಯೊಂದರಲ್ಲಿ ಪಂಡಿತರು ತಮ್ಮ ಸಹಜ ಮನಃಪ್ರವೃತ್ತಿಗೆ ವಿರುದ್ಧವಾಗಿ ತಮ್ಮ ತಾರ್ಕಿಕ ಪ್ರತಿಭೆಯನ್ನು ಮುಂದೆತರಬೇಕಾಯಿತು. ಅದು ನಡೆಯುವಾಗಲೂ ಅದು ಅವರಿಗೆ ಸಂತೋಷವನ್ನೇನೂ ಕೊಟ್ಟಿರಲಿಲ್ಲ. ಆ ದಿನಗಳಲ್ಲಿ ನನ್ನ ಹತ್ತಿರ ಆಗಾಗ ಹೇಳುತ್ತಿದ್ದರು – 'ಇದೇನು ಕರ್ಮ! ಯಾರದೋ ಬರವಣಿಗೆಯಲ್ಲಿ ದೋಷಗಳನ್ನು ಹುಡುಕುವುದಕ್ಕೆ ನಾನು ಸಮಯ ವ್ಯಯಮಾಡಬೇಕಾಯಿತಲ್ಲ!' ಎಂದು.

ಇದು ಅಪವಾದಾತ್ಮಕವಷ್ಟೆ; ಮತ್ತು ಅದು ಸುಖಾಂತವೂ ಆಯಿತು, ಸಂಬಂಧಿತರ ನಡುವೆ ಹೆಚ್ಚಿನ ಗೌರವಾದರಗಳಿಗೆ ದಾರಿಮಾಡಿತು. ಆದರೆ ಆ ಸಂದರ್ಭದಲ್ಲಿ ಶರ್ಮರ ಬೌದ್ಧಿಕ ತೀಕ್ಷ್ಣತೆಯ ಪರಿಚಯವಂತೂ ಆಗುವಂತಾಯಿತು.

ಶರ್ಮರವರ ನಿಜಸ್ವಭಾವವೆಂದರೆ ಗಾಂಭೀರ್ಯ ಮತ್ತು ವಾಕ್ಸಂಯಮ. ವಾಕ್ಯಾರ್ಥ ವಿದ್ವದ್‌ಗೋಷ್ಠಿಗಳಲ್ಲಿ ಅವರು ತೋರುತ್ತಿದ್ದ ಔಚಿತ್ಯಪ್ರಜ್ಞೆ ಉದಾತ್ತರೀತಿಯದು. ಒಂದು ಗೋಷ್ಠಿಯಲ್ಲಿ ಪಂಡಿತರೊಬ್ಬರು ಒಂದು ಆಕ್ಷೇಪಕ್ಕೆ ಉತ್ತರಿಸಲು ಕ್ಲೇಶಪಟ್ಟಿದ್ದರು. ಗೋಷ್ಠಿಯು ಮುಗಿದ ಮೇಲೆ ಶರ್ಮರವರು ಮಿತ್ರರೊಡನೆ ಖಾಸಗಿಯಾಗಿ "ಅಲ್ಲಿ

ಎದುರಾದ ಆಕ್ಷೇಪಕ್ಕೆ ಹೀಗೆ ಸಮಾಧಾನ ಸಾಧ್ಯವಿತ್ತು" ಎಂದು ವಿವರಿಸಿದರು. "ಇದನ್ನು ತಾವು ಅಲ್ಲಿಯೇ ಹೇಳಿದ್ದಿದ್ದರೆ ಇತ್ಯರ್ಥ ಆಗುತ್ತಿತ್ತಲ್ಲ?" ಎಂದು ಮಿತ್ರರು ಹೇಳಿದರು. ಪಂಡಿತರು ಉತ್ತರಿಸಿದರು : "ಅದು ಬೇರೊಂದು ಶಾಸ್ತ್ರಕ್ಕೆ ಸಂಬಂಧಿಸಿದ ವಿಷಯ. ನನ್ನದಲ್ಲದ ಶಾಸ್ತ್ರದ ವಿಷಯದಲ್ಲಿ ನಾನು ಮಾತನಾಡುವುದು ತಪ್ಪಾಗುತ್ತದೆ."

## ಪ್ರಬುದ್ಧತೆ

ಘನೀಕೃತ ಪಾಂಡಿತ್ಯದಲ್ಲಿ ನೆಲೆಗೊಂಡವರ ಒಂದು ಸ್ವಭಾವವೆಂದರೆ ಯಾವುದೇ ವಿಷಯದ ಬಗೆಗೆ ನೇರವಾಗಿ ಚಿಂತಿಸುವುದು ಮತ್ತು ನೇರವಾಗಿ ಎಂದರೆ ಅನ್ಯೂನಾಧಿಕವಾಗಿ ಮಾತನಾಡುವುದು. ಇಂತಹ ಆರ್ಜವಕ್ಕೆ ಅವರು ತುಂಬಾ ಬೆಲೆ ಕೊಡುತ್ತಾರೆ. ಈ ಗುಣವು ಶಿಷ್ಟತೆಯ ದೃಷ್ಟಿಯಿಂದ ಮೆಚ್ಚಬೇಕಾದುದೇ. ಆದರೆ ಈ ಮಾರ್ಗವು ಇತರರಿಗೆ ಪರ್ಯಾಪ್ತವೆನಿಸದಿರುವ ಸಂಭವವುಂಟು; ಕೆಲವು ಸಲ ಅವರ ನಿಲವು ಯುಗಾನುಕೂಲವಲ್ಲವೆಂಬ ಅನಿಸಿಕೆಯೂ ಕೆಲವರಲ್ಲಿ ಮೂಡಬಹುದು. ಈ ಸೂಕ್ಷ್ಮತೆಗಳನ್ನು ಮನಸ್ಸಿನಲ್ಲಿ ಧರಿಸಿ ಜನರಿಗೆ ಹಿತವೆನಿಸುವ ರೀತಿಯಲ್ಲಿ ಆದರೆ ತಮ್ಮ ತಾತ್ತ್ವಿಕ ನಿಲವಿಗೆ ಭಂಗಬಾರದಂತೆ ಅಭಿಪ್ರಾಯನಿವೇದನೆ ಮಾಡಬೇಕಾಗುತ್ತದೆ. ಇದು ಸ್ವಲ್ಪ ನಾಜೂಕಿನ ವ್ಯವಹಾರವೇ. ಶರ್ಮರು ಈ ಸೂಕ್ಷ್ಮ ಅಂಶಗಳನ್ನು ಅಂತರ್ಗತ ಮಾಡಿಕೊಂಡಿದ್ದರು. ಆದುದರಿಂದ ಅವರ ಯಾವುದೇ ಅಭಿಪ್ರಾಯಮಂಡನೆ ಎಷ್ಟು ಖಚಿತವಾಗಿರುತ್ತಿತ್ತೋ ಅಷ್ಟೇ ಸೌಮ್ಯವೂ ಗ್ರಾಹ್ಯವೂ ಆಗಿರುತ್ತಿತ್ತು.

ಇದನ್ನೆಲ್ಲ ಅರಿತೂ ಕೆಲವು ವಿರಳ ಸಂದರ್ಭಗಳಲ್ಲಿ ಯಾರೊಡನೆಯೋ ಅಭಿಪ್ರಾಯಭೇದ ಉಂಟಾಗುತ್ತಿತ್ತು. ಅಂತಹ ಸನ್ನಿವೇಶದಲ್ಲಿ ಶರ್ಮರು ತಮ್ಮ ನಿಲವನ್ನು ಸ್ಫುಟವಾಗಿ ಪ್ರಕಟಪಡಿಸಲು ಹಿಂದೆಗೆಯುತ್ತಿರಲಿಲ್ಲ. ಆದರೆ ಹಾಗೆ ಮಾಡುವಲ್ಲಿ ಯುಕ್ತ ಮರ್ಯಾದಾನುಸರಣೆ ಆಗಲೇಬೇಕೆಂಬುದು ಶರ್ಮರು ತಮಗೇ ವಿಧಿಸಿಕೊಂಡ ಶಾಸನವಾಗಿತ್ತು. ಅವರ ಈ ವರ್ತನೆಯನ್ನು ನೋಡುವಾಗ ಅವರು ಜಡ ಪಾಂಡಿತ್ಯದ ಮಟ್ಟದಿಂದ ಅತೀತರಾಗಿ ಎಷ್ಟುಮಟ್ಟಿನ ಪ್ರಬುದ್ಧತೆ ತಲಪಿದ್ದರೆಂಬುದು ಎದ್ದುಕಾಣುತ್ತಿತ್ತು. ಮಿತಿಮೀರಿದ ತರ್ಕಪ್ರಯೋಗವನ್ನು ಅವರು ಇಷ್ಟಪಡುತ್ತಿರಲಿಲ್ಲ. ಪಶುಬಲಿ ಮೊದಲಾದ ಗತಯುಗದ ವಿಷಯಗಳು ಪ್ರಸ್ತಾವಗೊಂಡಾಗ ಅವರು 'ಶಾಸ್ತ್ರನಿರ್ದಿಷ್ಟವಾಗಿದ್ದರೂ ಜನರ ಈಗಿನ ಶಿಷ್ಟ ರೀತಿ–ನೀತಿಗಳಿಗೆ ಸಮ್ಮತವಲ್ಲದ ಆಚರಣೆಗಳು ನಡೆಯಲೆಂದು ಆಗ್ರಹಿಸುವುದು ತಪ್ಪು" ಎಂದು ದೃಢವಾಗಿ ಹೇಳುತ್ತಿದ್ದರು.

ಸಾವಿರಾರು ಪುಟಗಳಷ್ಟು ಇರುವ ಶರ್ಮರ ಬರಹಗಳಲ್ಲಿ ರಾಜಿಯಿಲ್ಲದ ಉನ್ನತ ಶಾಸ್ತ್ರನಿಷ್ಠೆ, ತಾವು ಬರೆಯುವುದು ಸಾಮಾನ್ಯರಿಗೆ ತಲಪಬೇಕೆಂಬ ದೃಷ್ಟಿಯ ಸರಳತೆ – ಎರಡಕ್ಕೂ ನಿದರ್ಶನಗಳನ್ನು ಧಾರಾಳವಾಗಿ ನೋಡಬಹುದು. ಅಲಂಕಾರಶಾಸ್ತ್ರದ ಮತ್ತು ಕನ್ನಡ ವ್ಯಾಕರಣದ ಕೆಲವು ವಿವಾದಾಸ್ಪದ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ

ಶರ್ಮರು ಬರೆದಿರುವ ಶೋಧಲೇಖನಗಳ ಹರಹನ್ನು ಗ್ರಹಿಸಲು ಈ ಕ್ಷೇತ್ರಗಳಲ್ಲಿ ವ್ಯುತ್ಪನ್ನರಾದವರೂ ತಾಳ್ಮೆಯಿಂದ ನಿಧಾನವಾಗಿ ಹಲವು ಸಾರಿ ಓದಿ ಮಂಥನ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಅವರ ನೀತಿಬೋಧಕ ಲೇಖನಗಳಂತಹವು ಸಾಮಾನ್ಯ ಸಾಹಿತ್ಯಾಸಕ್ತರೂ ಕ್ಲೇಶವಿಲ್ಲದೆ ಓದಬಹುದಾಗಿದೆ.

## ಶಾಸ್ತ್ರಸೌಂದರ್ಯ ಪ್ರಕಟೀಕರಣ

ಶರ್ಮರು ವ್ಯಾಕರಣಶಾಸ್ತ್ರದ, ಸಾಹಿತ್ಯಶಾಸ್ತ್ರದ ಮತ್ತು ವೇದಾಂತಶಾಸ್ತ್ರದ ಕಗ್ಗಂಟುಗಳನ್ನು ಬಿಡಿಸಿ ಸ್ಪಷ್ಟೀಕರಿಸಿ ಉಪಕರಿಸಿದುದು ಮಾತ್ರವಲ್ಲ; ಶಾಸ್ತ್ರದ ವೈಶ್ವಿಕ ದೃಷ್ಟಿ, ಸಮಗ್ರತೆ, ಸೌಂದರ್ಯ – ಇವನ್ನೂ ಪ್ರಕಾಶಪಡಿಸಿದರು. ಈ ಸಾಮಗ್ರ್ಯದ ನೆಲೆಯಿಂದಾಗಿ ಶರ್ಮರ ವ್ಯಕ್ತಿತ್ವಕ್ಕೆ ಉಜ್ಜ್ವಲತೆ ಬಂದಿತ್ತು. ವಿದ್ವತ್ತೆಯ ಗಹನತೆ ಮತ್ತು ವ್ಯಕ್ತಿತ್ವದ ಪರಿಪಕ್ವತೆ – ಈ ಎರಡರ ಸಮಾಗಮವು ವಿರಳವಾಗಷ್ಟೆ ಕಾಣಸಿಗುತ್ತದೆ. ಅಂತಹ ವಿರಳರಲ್ಲಿಯೂ ವಿರಳರು ಶರ್ಮರು.

ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಸಾಮಾನ್ಯರಿಗೂ ಶಾಸ್ತ್ರಕುತೂಹಲಿಗಳಿಗೂ ಅನಿವಾರ್ಯ ಪರಿಕರಗಳನ್ನು ಶರ್ಮರು ಒದಗಿಸಿದ್ದಾರೆ – ಸಂಸ್ಕೃತದಲ್ಲಿ ಪರೀಕ್ಷಾ ಪುಸ್ತಕಗಳು ಮತ್ತು ಪ್ರವೇಶಿಕೆಗಳು, ಕನ್ನಡದಲ್ಲಿ ಅಮರಕೋಶ, ವಾಕ್ಯಪದೀಯ ಮೊದಲಾದವು. ವೇದಾಂತಕ್ಷೇತ್ರದಲ್ಲಿ ಅವರು 2003–2008ರ ಅವಧಿಯಲ್ಲಿ ಹೊರತಂದ ಮಾಂಡೂಕ್ಯಪ್ರವಚನ, ತೈತ್ತಿರೀಯೋಪನಿಷತ್ಪ್ರವಚನ, ಸಾಂಖ್ಯಕಾರಿಕಾವೃತ್ತಿ, ಪಂಚದಶೀಪ್ರವಚನ–ಇವಂತೂ ಅನುಪಮ ಶೋಧಕೃತಿಗಳೇ ಆಗಿದ್ದು ಶರ್ಮರ ವೇದಾಂತಚಿಂತನೆಯ ಗಾಢತೆಯನ್ನು ಬಿಂಬಿಸಿವೆ. ಅವರು ಮಾಡಿರುವ ರಾಮಾಯಣ, ಭಾಗವತ, ವಿಷ್ಣುಪುರಾಣ ಅನುವಾದಗಳು ಆಸ್ತಿಕ ವಾಚಕರಿಗೆ ಮುಖ್ಯ ಅವಲಂಬಗಳಾಗಿ ಉಳಿದಿವೆ. ಅವರ ಆಧಿಕಾರಿಕ ಕ್ಷೇತ್ರಕ್ಕೆ ಸಂಬಂಧಿಸಿದ (ಸಂಸ್ಕೃತದಲ್ಲಿ) 'ಸಂಸ್ಕೃತಂ ನಾಮ ದೈವೀ ವಾಕ್', (ಕನ್ನಡದಲ್ಲಿ) 'ವ್ಯಾಕರಣಶಾಸ್ತ್ರದ ಪರಿವಾರ' ಮತ್ತು 'ಪ್ರಜ್ಞಾರಂಗ' ಶೀರ್ಷಿಕೆಗಳಲ್ಲಿ ಸಂಕಲನಗೊಂಡಿರುವ ಪ್ರಬಂಧಗಳು ಉನ್ನತಮಟ್ಟದ ಶೋಧಲೇಖಗಳಾಗಿವೆ. ಅವರ ಸಂಸ್ಕೃತರಚನೆಗಳಲ್ಲಿ ಗಣನೀಯವಾದ 'ಶ್ರೀಬಾಹುಬಲಿವಿಜಯಮ್' ಮತ್ತು 'ಏಕಚಕ್ರಮ್' ರೂಪಕಗಳೂ 'ಕುಸುಮಾಂಜಲಿಃ' ಶೀರ್ಷಿಕೆಯಲ್ಲಿ ಸಂಕಲನಗೊಂಡಿರುವ ಸ್ವತಂತ್ರ ಪದ್ಯರಚನೆಗಳೂ ಶ್ರೀಶಂಕರಭಗವತ್ಪಾದರ ಜೀವನ–ಸಾಧನೆಗಳನ್ನು ಕುರಿತ 'ಶ್ರೀಶಂಕರಚರಿತಾಮೃತಮ್' ಕಾವ್ಯವೂ ಶರ್ಮರ ಉನ್ನತಮಟ್ಟದ ಕಾವ್ಯರಚನಾಕೌಶಲಕ್ಕೆ ಸಾಕ್ಷ್ಯಗಳಾಗಿವೆ. ಆಯ್ದ ಸುಭಾಷಿತಗಳಿಗೆ ಸಮಸಾಮಯಿಕ ವ್ಯಾಖ್ಯಾನ ನೀಡಿರುವ 'ಸೂಕ್ತಿ–ವ್ಯಾಪ್ತಿ' ಮೂರು ಸಂಪುಟಗಳೂ 'ಮಾನವಧರ್ಮಶಾಸ್ತ್ರ ಮತ್ತು ಮಹಿಳೆಯರು' ಪರಾಮರ್ಶನೆಯೂ ಅಭಿಜಾತ ವಾಙ್ಮಯ ಪರಂಪರೆಯ ಚಿರಕಾಲಿಕತೆಯನ್ನು ದೃಷ್ಟಾಂತಪಡಿಸಿವೆ. ಹೀಗೆ

ಸನಾತನಪರಂಪರೆಗೂ ಇಪ್ಪತ್ತೊಂದನೇ ಶತಮಾನದ ಮಾನಸಿಕತೆಗೂ ನಡುವಣ ಸೇತುವೆಯಾಗಿ ಶರ್ಮರು ಗಮನ ಸೆಳೆಯುತ್ತಾರೆ.

* * *

## ಕಾವ್ಯರಚನಾಪ್ರೌಢಿಮೆ

ಅನೇಕ ಅವಧಾನ ಸಂದರ್ಭಗಳಲ್ಲಿ ಚಮತ್ಕಾರಪೂರ್ಣ ಸಮಸ್ಯಾಪಂಕ್ತಿಗಳನ್ನು ನೀಡಿ ಶರ್ಮರು ಶ್ರೋತೃಗಳನ್ನು ರಂಜಿಸಿದ್ದಾರೆ. 'ಪತಿಯನ್ನು ನೋಡಿ ಸೀತೆಯು ಮುಖವನ್ನು ಸಿಂಡರಿಸಿಕೊಂಡಳು' ಎಂಬ ಅಭಿಪ್ರಾಯದ ಸಮಸ್ಯೆ ಮತ್ತು ಅವರದೇ ಪೂರಣ ಹೀಗಿತ್ತು :

ಸಮಾಯಾಂತಂ ಕಾಮಾದಲಸಗಮನಂ ಕ್ರೂರನಯನಂ
ಪರೀತಂ ದಾಸೀಭಿಃ ಕರವಿಧೃತದೀಪಾದಿಭಿರಲಮ್ ।
ಮದಾಂಧಂ ಪೌಲಸ್ತ್ಯಂ ವಿಕೃತಮನಸಂ ರಾಕ್ಷಸಚಮೂ-
ಪತಿಂ ದೃಷ್ಟ್ವಾ ಸೀತಾ ವ್ಯಪನಯತಿ ಕೋಪೇನ ವದನಮ್ ॥

ಶರ್ಮರ ಕಾವ್ಯರಚನಾಪ್ರತಿಭೆ ಮೇಲ್ಮಟ್ಟದ್ದು.

ಮನೋಜ್ಞವಾದ ಮೂರು ಸುಪ್ರಭಾತಪದ್ಯಮಾಲಿಕೆಗಳನ್ನು ಅವರು ರಚಿಸಿದ್ದಾರೆ: ಶ್ರೀರಾಮಚಂದ್ರಸುಪ್ರಭಾತ, ಶ್ರೀಸುಬ್ರಹ್ಮಣ್ಯಸುಪ್ರಭಾತ, ಶ್ರೀಗೋಮ್ಮಟೇಶ್ವರಸುಪ್ರಭಾತ.

ತಮಗೆ ಪರಮಾರಾಧ್ಯರಾದ ಶ್ರೀಶಂಕರಭಗವತ್ಪಾದರ ಭಾವಪೂರ್ಣ ಸ್ತವನವನ್ನೂ ಅವರು ಮಾಡಿಯೇ ಇದ್ದಾರೆ. ಆ ಮಾಲಿಕೆಯ ಒಂದು ಪುಷ್ಪ ಇದು :

ಪ್ರಸ್ಥಾನತ್ರಯಭಾಷ್ಯಮದ್ಭುತಮಭೂತ್ತ್ವತ್ತಃ ಸಮುದ್ರೋಪಮಂ
ಯದ್ರತ್ನಾನ್ಯುಪಜೀವ್ಯ ಪಂಡಿತವರ್ಯೈರಕ್ಷೋಭ್ಯವೈದುಷ್ಯಕೈಃ ।
ವ್ಯಾಖ್ಯಾ-ವಾರ್ತಿಕ-ವೃತ್ತಿ ಸಿದ್ಧಿಸಹಿತಾನ್ ನಿರ್ಮಾಯ ಭೂಷಾಗಣಾನ್
ಶ್ರೀಮಚ್ಛಂಕರದೇಶಿಕೇಂದ್ರ ರುಚಿರಾನ್ ಶ್ರೀಶಾರದಾ ಭೂಷಿತಾ ॥

ಸಾಮಾನ್ಯವಾಗಿ ಶಬ್ದಶಾಸ್ತ್ರದ ಹಿನ್ನೆಲೆಯಿಂದ ಬಂದವರ ರಚನೆಗಳಲ್ಲಿ ಪರಿಷ್ಕಾರ ಇದ್ದರೂ ಮನೋಹರತೆ ಇದ್ದೇ ಇರುತ್ತದೆಂಬ ನಿಶ್ಚಯವಿಲ್ಲ. ಸೌಷ್ಠವವೂ ಸೌಂದರ್ಯವೂ ಒಗ್ಗೂಡುವುದು ಒಂದು ವಿರಳ ಸಂಯೋಗ. ಇಂತಹ ಆಸ್ವಾದ್ಯತೆಯನ್ನು ಶರ್ಮರ ವಿಪುಲ ನಿರ್ಮಿತಿಗಳಲ್ಲಿ ಕಾಣಬಹುದು. ನಿದರ್ಶನಕ್ಕೆ : ಶರ್ಮರವರ 'ಶ್ರೀಗೋಮ್ಮಟೇಶ್ವರಪಂಚರತ್ನ' ಮಾಲಿಕೆಯ ಒಂದು ಪದ್ಯ ಇದು :

ಅರಾಲಲೋಲಿತಾಲಕಾವಲೀವಿಲಾಸಿತಾಲಿಕಂ
ಕರಾಲಕರ್ಮಮರ್ಮಭೇದನಿರ್ಮಲಂ ನಿರಾಮಯಮ್ ।

ಸರೋರುಹಾಸ್ಯಶೋಭಿಫುಲ್ಲಮಲ್ಲಿಕಾದರಸ್ಮಿತಂ
ಭಜೇ ಭವಾಂಬುಧೇಸ್ತರಿಂ ಚಿರಾಯ ಗೋಮ್ಮಟೇಶ್ವರಮ್ ॥

ಪಂಚಚಾಮರ ವೃತ್ತದ ಈ ಸಾಲುಗಳಲ್ಲಿನ 'ಲ'ಕಾರ – 'ರ'ಕಾರಗಳ ಗುಂಫನವೂ ಪ್ರಾಸಾದಿಕತೆಯೂ ಅತ್ಯಂತ ರಮ್ಯ.

## ರಾಷ್ಟ್ರಾಭಿಮುಖ ಸ್ಪಂದನ

ಶರ್ಮರವರ ಮೂರು ಲಘುರೂಪಕಗಳಲ್ಲಿ ಬಂದಿರುವ ಪದ್ಯಗಳೂ ಪೂರ್ಣ ಪ್ರಮಾಣದ ಪದ್ಯಕೃತಿಗಳೂ ಅಲ್ಲದೆ ಅವರು ಬರೆದ ಇಪ್ಪತ್ತಕ್ಕೂ ಹೆಚ್ಚು ಸ್ವತಂತ್ರ ಪದ್ಯಮಾಲಿಕೆಗಳು ಲಭ್ಯವಿವೆ. ಅವುಗಳಲ್ಲಿ ವಾಗ್ದೇವತಾಸ್ತುತಿ, ಶ್ರೀಶಾರದಾಪಂಚಕ, ಶ್ರೀಶಂಕರಭಗವತ್ಪಾದಸ್ತುತಿ, ಶ್ರೀಶ್ರೀಧರಸ್ವಾಮಿಸ್ತುತಿ, ಶ್ರೀಗುರುಸ್ತುತಿ ಮೊದಲಾದವೂ ಸೇರಿವೆ. ಗಮನ ಸೆಳೆಯುವ ಸಂಗತಿಯೆಂದರೆ ಸಂಸ್ಕೃತವಾಙ್ಮಯದಲ್ಲಿ ವಿರಳವೆನ್ನ ಬಹುದಾದ ಸಾಮಾಜಿಕ–ರಾಷ್ಟ್ರೀಯ–ಧ್ಯೇಯ ನಿರೂಪಕಗಳಾದ ಹಲವಾರು ಪದ್ಯಗಳ ರಚನೆಗೂ ಶರ್ಮರು ಉತ್ಸಹಿಸಿರುವುದು.

ಶರ್ಮರನ್ನು ಸಮೀಪದಿಂದ ಕಂಡಿರುವ ಎಲ್ಲರಿಗೂ ಅವರ ಈ ಮನಃಸ್ಪಂದನ ಪರಿಚಿತವೇ ಆಗಿದೆ. ಅವರ 'ಭಾವೈಕತಾ' ಪದ್ಯಮಾಲಿಕೆಯ ಒಂದು ಪದ್ಯ ಇದು :

ಅಯಂ ಹಿಂದುಃ ಕ್ರೈಸ್ತೋ ಯವನ ಇತಿ ಭೇದೋಽಪಸರತು
ಧ್ರುವಂ ರಾಷ್ಟ್ರಂ ನೇತುಂ ಪ್ರಗತಿಪರಮೈಕ್ಯಂ ವಿಜಯತೇ ।
ಅಪಾಂ ವ್ಯೂಹಶ್ಚೈಕಶ್ಚಲಯತಿ ಮಹದ್ಯಂತ್ರಮಪಿ ತತ್
ಸಮೇಷಾಂ ಚೈತನ್ಯಂ ವಹತಿ ಖಲು ರಾಷ್ಟ್ರಪ್ರವಹಣಮ್ ॥

'ರಾಷ್ಟ್ರದೇವೋ ಭವ' ಎಂಬ ಪದ್ಯಗುಚ್ಛದಲ್ಲಿ ತಂದೆ–ತಾಯಿ–ಗುರುಗಳಂತೆ ರಾಷ್ಟ್ರವೂ ಪ್ರತಿಯೊಬ್ಬರಿಗೆ ಅವಶ್ಯ ಶ್ರದ್ಧಾಸ್ಥಾನವಾಗಿರಬೇಕೆಂಬ ಆವಾಹನೆ ಇದೆ :

ಮನಸಿ ವಚಸಿ ಕಾಯೇ ಮಾತೃದೇವೋ ಭವ ತ್ವಂ
ನಿರವಧಿಪಿತೃದೇವೋ ನಿರ್ಮಲಃ ಕರ್ಮಯೋಗೀ ।
ಅಥ ಮತಿಪರಿಶುದ್ಧ್ಯಾಚಾರ್ಯ ದೇವಶ್ಚ ಭೂಯಾಃ
ತದನು ವಿಗತಶಂಕಃ ಶ್ರದ್ಧಯಾ ರಾಷ್ಟ್ರದೇವಃ ॥

ಸೈನಿಕರ ತ್ಯಾಗ–ಶೌರ್ಯ–ಸಮರ್ಪಣ ಭಾವಗಳು ರಾಷ್ಟ್ರಸ್ವಾಸ್ಥ್ಯದ ಅಸ್ತಿಭಾರ ಎಂಬ ಮನವರಿಕೆಯಿಂದ ಸ್ಫುರಿತವಾಗಿರುವುದು 'ವೀರೋತ್ತೇಜನಮ್' ಪದ್ಯಮಾಲಿಕೆ. ರಾಷ್ಟ್ರರಕ್ಷಣೆಯ ವಿಷಯದಲ್ಲಿ ಯಾವ ಭ್ರಾಮಕತೆಗಳಿಗೂ ಅವಕಾಶವಿರಬಾರದೆಂಬ ಅವಧಾರಣೆ ಇಲ್ಲಿಯದು :

ಯತ್ ಸ್ವಾತಂತ್ರ್ಯಂ ಬಹುಯತ್ನೇನ
ಭಾರತಮಾತಾ ಪ್ರಾಪತ್ ಸ್ವೇನ ।
ನಿರ್ದಯಮರ್ದಿತ ನರರುಧಿರೇಣ
ಹ್ರಿಯತೇ ತತ್ತವ ಮಿಷತೋಽನ್ಯೇನ ॥
ಮಸ್ತಕಮುಚ್ಚೈರಸ್ತು ಸಖಾಯಃ
ಕಿಂ ವಃ ಶಾಶ್ವತಿಕೋಽಯಂ ಕಾಯಃ ।
ದ್ರಾವಿತದುರ್ಜನಶತ್ರುನಿಕಾಯಾ
ಕೀರ್ತಿಸ್ತ್ವೇಕಾ ಭುವಿ ನಿರಪಾಯಾ ॥

## ಸ್ವಭಾವೌನ್ನತ್ಯ

"ವಿದ್ವಾನ್ ಎನ್. ರಂಗನಾಥಶರ್ಮಾ ಅವರ ಸಂಸ್ಕೃತವಿದ್ವತ್ತಿಗೆ ಸರಿಸಮನಾದುದು ಅವರ ಕಲ್ಪನಾಶಕ್ತಿ. ಅದ್ಯತನೀಯ ಸಂಸ್ಕೃತಲೇಖಕರಲ್ಲಿ ಈ ಎರಡೂ ಶಕ್ತಿಗಳನ್ನು ಇಷ್ಟು ಉನ್ನತ ಪ್ರಮಾಣದಲ್ಲಿ ತಮ್ಮಲ್ಲಿ ಮೇಳವಿಸಿಕೊಂಡಿರುವವರು ತುಂಬಾ ವಿರಳ. ಶಾಸ್ತ್ರಮೇಧೆಯ ನಿಶಿತತೆಯು ಹಿಂದಿನಂತೆ ಈಗಲೂ ಉತ್ಕೃಷ್ಟಮಟ್ಟದ ಫಲಸಮೃದ್ಧಿಯನ್ನು ನೀಡಬಲ್ಲದೆಂಬುದಕ್ಕೆ ಶ್ರೇಷ್ಠ ನಿದರ್ಶನ ವಿದ್ವಾನ್ ಎನ್. ರಂಗನಾಥಶರ್ಮಾ ಅವರು."

ಮೇಲಿನದು ಶರ್ಮರವರ ಬಗೆಗೆ ಸ್ವಯಂ ಮೇರುಸದೃಶ ವಿದ್ವಾಂಸರಾಗಿದ್ದ ಡಾ॥ ಕೆ. ಕೃಷ್ಣಮೂರ್ತಿ ಅವರ ಪ್ರಶಂಸೋದ್ಗಾರ.

* * *

ಶರ್ಮರವರಮಟ್ಟದ ಪಾಂಡಿತ್ಯ ಸಾಧಿಸಿರುವವರು ದೇಶದಲ್ಲಿ ಬೆರಳೆಣಿಕೆಯಷ್ಟು ದೊರೆತಾರೇನೊ. ಆದರೆ ಶಾಸ್ತ್ರಾನುಸಂಧಾನವು ವ್ಯಕ್ತಿತ್ವದ ಉದಾತ್ತತೆಯಲ್ಲಿ ಪರ್ಯವಸಾನಗೊಂಡಿರುವ ಇಂತಹ ನಿದರ್ಶನಗಳು ದುಷ್ಪ್ರಾಪ್ಯ. ಶರ್ಮರವರಲ್ಲಿ ಮೂರ್ತೀಕೃತವಾಗಿದ್ದ ದೃಷ್ಟಿವೈಶಾಲ್ಯ, ಉದಾರತೆ, ಸಮಾಜಾಭಿಮುಖತೆ – ಇವು ಅನ್ಯಾದೃಶವಾದವು. 'ಬುದ್ಧೇಃ ಫಲಂ ಅನಾಗ್ರಹಃ' ಎಂಬ ರೀತಿಯ ಔನ್ನತ್ಯವನ್ನು ಅವರು ಮೆರೆದಿರುವುದನ್ನು ಕಾಣುವಾಗ ಅವರಿಗೆ ಅವರೇ ಉಪಮೆ ಎಂದು ಅನನ್ವಯರೀತಿಯಲ್ಲಿ ವರ್ಣಿಸಬೇಕಾಗುತ್ತದೆ. ಅವರ ಈ ಪ್ರಬುದ್ಧತೆಯ ಒಂದು ಹೃದಯಂಗಮ ನಿದರ್ಶನವೆಂದರೆ ಅವರು ತಮ್ಮನ್ನು ಡಿ.ವಿ.ಜಿ.ಯವರಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡ ಬಗೆ. ಈ ಮಟ್ಟದ ಆತ್ಮಸಮರ್ಪಣೆಯ ಅನ್ಯ ನಿದರ್ಶನ ದುರ್ಲಭ. ಇದನ್ನು ವಿಸ್ಮಯಕರವೆನ್ನಬೇಕಾಗಿದೆ.

## ಡಿ.ವಿ.ಜಿ. ಆರಾಧಕ

ಡಿ.ವಿ.ಜಿ.ಯವರಲ್ಲಿ ಶರ್ಮರು ಬೆಳೆಸಿಕೊಂಡ ಗೌರವವೂ ಅವರ ಬಗೆಗೆ ಡಿ.ವಿ.ಜಿ. ತೋರಿದ ಗೌರವಪೂರ್ವಕ ಪ್ರೀತಿಯೂ ಅಲೌಕಿಕರೀತಿಯದು. ಅದನ್ನು ಒಂದು ಅಪೂರ್ವ ಋಣಾನುಬಂಧವೆಂದೇ ಕರೆಯಬಹುದು. 1950ರ ದಶಕದ ಮಧ್ಯಭಾಗದಲ್ಲಿ ಪಂಡಿತರ ಪರಿಚಯವಾದಾಗಿನಿಂದ ಡಿ.ವಿ.ಜಿ. ತಮ್ಮ ಬರಹಗಳನ್ನು ಪೂರ್ವಪರಿಶೀಲನೆಗಾಗಿ ಶರ್ಮರಿಗೆ ಕಳಿಸುವ ಪರಿಪಾಟಿಯೇ ಬೆಳೆಯಿತು. ನಿರಂತರ ಒಡನಾಟವಂತೂ ಕಟ್ಟಳೆಯೇ ಆಯಿತು. ಹಾಗೆ ಇಪ್ಪತ್ತು ವರ್ಷಕಾಲ ಡಿ.ವಿ.ಜಿ.ಯವರಿಗೆ ಅತ್ಯಂತ ಆನಂದವನ್ನು ಒದಗಿಸಿದುದು ಶರ್ಮರ ಸಂಗಡಿಕೆ. ಡಿ.ವಿ.ಜಿ.ಯವರ ಸಮಾಜಾಭಿಮುಖ ಮನೋರಚನೆಯ ಬಗೆಗೆ ಶರ್ಮರು ತಳೆದ ಆರಾಧನಾಭಾವನೆಯನ್ನು ವರ್ಣಿಸಲು ಮಾತುಗಳಿಲ್ಲ. ಶರ್ಮರಲ್ಲಿ ಸ್ವಭಾವಗತವಾಗಿಯೆ ಇದ್ದ ಲೋಕಹಿತದೃಷ್ಟಿಯನ್ನು ಡಿ.ವಿ.ಜಿ. ಸಾಹಚರ್ಯ ಇನ್ನಷ್ಟು ದೃಢಪಡಿಸಿತು ಎನ್ನಬಹುದು. ಡಿ.ವಿ.ಜಿ.ಯವರ ಆದೇಶಕ್ಕೂ ಕಾಯದೆ ಅವರ ಅಪೇಕ್ಷೆಯನ್ನು ಕಾರ್ಯಗತಗೊಳಿಸಲು ಶರ್ಮರು ತವಕಿಸುತ್ತಿದ್ದರು. ಹೀಗೆ ಸಹಜವಾಗಿಯೆ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯೊಡನೆ ಶರ್ಮರ ತಾದಾತ್ಮ್ಯ ಏರ್ಪಟ್ಟಿತು. ಸಂಸ್ಥೆಯ ಎಲ್ಲ ಕಲಾಪಗಳಲ್ಲಿ ಒಡಗೂಡುವಿಕೆ, ವ್ಯಾಸಂಗಗೋಷ್ಠಿಯ ತಂಡಕ್ಕೆ ವ್ಯಾಕರಣಬೋಧನೆ, ಸಂಸ್ಥೆಯ ಗ್ರಂಥಭಂಡಾರದ ಸಂಸ್ಕೃತ ವಿಭಾಗವನ್ನು ವ್ಯವಸ್ಥೆಗೊಳಿಸಿದುದು – ಎಲ್ಲವೂ ಸಹಜವಾಗಿ ನಡೆದವು.

ಪಂಡಿತರು ಶ್ರಮವಹಿಸಿ ವ್ಯವಸ್ಥೆ ಮಾಡಿದ ಈ ಸಂಸ್ಕೃತ ಗ್ರಂಥಸಂಗ್ರಹವನ್ನು ಈಗ ಒಂದು ಪ್ರತ್ಯೇಕ ವಿಭಾಗ ಮಾಡಿ ಸಜ್ಜುಗೊಳಿಸಿ ಇಡಲಾಗಿದೆ.

ಪುಡಿಪುಡಿಯಾದ ಅಸ್ಪಷ್ಟ ಬರಹದಲ್ಲಿದ್ದ 'ಮರುಳ ಮುನಿಯನ ಕಗ್ಗ' ಪದ್ಯರಾಶಿಗೆ ವ್ಯವಸ್ಥಿತರೂಪ ಕೊಡುವುದರಲ್ಲಿ ಡಿ.ವಿ.ಜಿ. ನಿಧನಾನಂತರ ಶರ್ಮರು ತೊಡಗಿಸಿದ ಪ್ರೀತಿಯ ಕಾಯಕ ಸಾಟಿಯಿಲ್ಲದುದು. ಶರ್ಮರು ಆ ಅಗಾಧ ಶ್ರಮವನ್ನು ಸ್ವೀಕರಿಸದಿದ್ದಿದ್ದರೆ 'ಮರುಳ ಮುನಿಯನ ಕಗ್ಗ' ಹೊರಬರುತ್ತಿರಲಿಲ್ಲವೆಂಬುದು ಖಂಡಿತ. ಈ ಕಾರ್ಯ ಬೇರಾರಿಂದಲೂ ಸಾಧ್ಯವಾಗುವ ಸಂಭವ ಇರಲಿಲ್ಲ.

ಡಿ.ವಿ.ಜಿ.ಯವರ ಹೆಸರಿನ ಪ್ರಸ್ತಾವ ಕಿವಿಗೆ ಬಿದ್ದರೆ ಶರ್ಮರು ಭಾವಾವಿಷ್ಟರಾಗಿ ಬಿಡುತ್ತಿದ್ದರು. ಒಂದು ಸಂದರ್ಭದಲ್ಲಿ ಶರ್ಮರು ನಿವೇದಿಸಿದ ನುಡಿನಮನ ಇದು :

> ರಾಜ್ಯಶಾಸ್ತ್ರ ಪ್ರಣಯನಖ್ಯಾತ ನೀತಿವಿದಗ್ರಣೀಃ
> ಮಂಕುತಿಮ್ಮನಕಗ್ಗಾದಿ ಗ್ರಥನಸ್ತುತದರ್ಶನಃ ॥
> ಅಧೀತಶ್ರುತದೃಷ್ಟಾನಾಂ ಸಕೃದ್ ಬುದ್ಧ್ಯನುಪಾತಿನಾಂ ।

ಯಾಥಾತಥ್ಯೇನ ಸಂಸ್ಮರ್ತಾ ಬೃಹತ್ ಕೋಶನಿಭಃ ಸದಾ ॥
ಅಪಿ ತೇ ಪುರುಷೋ ಲೋಕೇ ಶ್ರವಣೇ ಪತಿತಃ ಕ್ವಚಿತ್ ।
ಶೃಣು ತರ್ಹಿ ಸಖೇ ಸೋಽಯಂ ಡೀವೀಜೀಸಂಜ್ಞಿತಃ ಪುಮಾನ್ ॥

## ಅಂತರಂಗದಾರ್ಢ್ಯ

"ಯದೇವ ವಿದ್ಯಯಾ ಕರೋತಿ, ತದೇವ ವೀರ್ಯವತ್ತರಂ ಭವತಿ" (ಕೇವಲ ಯಾಂತ್ರಿಕ ರೀತಿಯಲ್ಲಿ ಗತಾನುಗತಿಕವಾಗಿ ಮಾಡುವ ಕೆಲಸಕ್ಕಿಂತ ಆಂತರಂಗಿಕ ಪ್ರಜ್ಞಾವಂತಿಕೆಯ ಆಧಾರದ ಮೇಲೆ ಮಾಡುವ ಕೆಲಸವು ಹೆಚ್ಚು ಸತ್ತ್ವವಂತವಾಗುತ್ತದೆ) – ಎಂಬ ಪ್ರಸಿದ್ಧ ಶ್ರುತ್ಯುಕ್ತಿ ಇದೆಯಷ್ಟೆ. ಯಾಂತ್ರಿಕವಾಗಿ ಮಾಡುವ ಕೆಲಸವು ಬಹಳವೆಂದರೆ ಯಾವುದೋ ಆವಶ್ಯಕತೆಯನ್ನು ತತ್ಕಾಲದಲ್ಲಿ ಪೂರೈಸುವ ಮಟ್ಟದಲ್ಲಿ ಇರುತ್ತದೆ. ಆದರೆ ಧೀಮಂತಿಕೆಯ ಅಸ್ತಿಭಾರದ ಮೇಲೆ ಮಾಡುವ ಕೆಲಸವು ಹೆಚ್ಚು ದೃಢವೂ ಪರಿಣಾಮಕಾರಿಯೂ ವ್ಯಾಪಕವೂ ಆಗುತ್ತದೆ. ಒಂದು ಕೆಲಸವನ್ನು ಹೊರಗಿನ ಪ್ರೇರಣೆಯಿಂದಲೋ ಅನಿವಾರ್ಯತೆಯಿಂದಲೋ ಮಾಡಿದಲ್ಲಿ ತಾತ್ಪೂರ್ತಿಕ ಉದ್ದೇಶವಷ್ಟೆ ನೆರವೇರೀತು. ಆದರೆ ದೀರ್ಘಕಾಲಿಕತೆಯೂ ಊರ್ಜಿತತೆಯೂ ಸಿದ್ಧಿಸುವುದು ಅಂತರಂಗದ ನಿಶ್ಚಯದ ಆಧಾರವಿದ್ದಲ್ಲಿ. ಅಂತರಂಗದ ದಾರ್ಢ್ಯವಿದ್ದರೆ ಹೆಚ್ಚಿನ ಪರಿಣಾಮಕಾರಿತೆ ದೊರೆಯುವುದು ಮಾತ್ರವಲ್ಲದೆ ಪ್ರಶಾಂತಿಯೂ ನಿಶ್ಚಲತೆಯೂ ಉಂಟಾಗಿ ಬಾಹ್ಯ ವ್ಯವಹಾರಗಳೂ ಸುಗಮವೂ ಸಂಘರ್ಷರಹಿತವೂ ಆಗುತ್ತವೆ. ಇಂತಹ ನಿಶ್ಚಲತೆಯ ಭೂಮಿಕೆ ಇದ್ದುದರಿಂದ ಶರ್ಮರು ನಿರಂತರ ಕಾರ್ಯಶೀಲರಾಗಿರುವುದು ಸಾಧ್ಯವಾಯಿತೆನ್ನಿಸುತ್ತದೆ. ಅವರು ಸದಾ ಗಂಭೀರವೂ ಜಟಿಲವೂ ಆದ ಚಿಂತನೆ–ಬರಹದಲ್ಲಿ ನಿರತರಾಗಿರುತ್ತಿದ್ದರೂ ಅವರ ಚಹರೆಯಲ್ಲಿ ಆಯಾಸವು ತೋರದಿರುವುದು ಅಚ್ಚರಿ ಮೂಡಿಸುತ್ತಿತ್ತು.

ಅವರ ತಾರುಣ್ಯದ ವೇಳೆಗೇ ಇಂತಹ ಮನಃಪಕ್ವತೆ ಏರ್ಪಟ್ಟಿತ್ತೆಂದು ಅನ್ನಿಸುತ್ತದೆ. ಹೀಗಿದ್ದುದರಿಂದ ಅವರ ಸಾಹಚರ್ಯವು ಅವರ ಒಡನಾಡಿಗಳಿಗೆಲ್ಲ ಮಾರ್ಗದರ್ಶಕವಾಗಿರುತ್ತಿತ್ತು.

ಗಾಢ ಪಾಂಡಿತ್ಯವಿದ್ದರೂ ಶರ್ಮರಿಗೆ ಅದನ್ನು ಮೆರೆಸುವುದರಲ್ಲಿ ಆಸಕ್ತಿ ಇರಲಿಲ್ಲ. ಸಂದರ್ಭದ ಆವಶ್ಯಕತೆ ಉಂಟಾದಾಗಷ್ಟೆ ಅವರ ವಿದ್ವತ್ತಿನ, ಶಾಸ್ತ್ರಪರಿಜ್ಞಾನದ ಮತ್ತು ಪರಾಮರ್ಶನೆಯ ಸರ್ವಂಕಷತೆಯ ಪರಿಚಯ ಉಳಿದವರಿಗೆ ಆಗುತ್ತಿತ್ತು. ಬೇರೆ ಸಮಯಗಳಲ್ಲಿ ಅವರು ಎಳೆಮಕ್ಕಳಂತೆ ಸರಳರೂ ಸುಲಭರೂ ಆಗಿರುತ್ತಿದ್ದರು. ಯಾವುದೇ ಸ್ತರದ ಎಷ್ಟೇ ವಯಸ್ಸಿನವರೊಡನೆಯೂ ಯಾವುದೇ ಬಿಂಕವಿಲ್ಲದೆ ಸಂತೋಷಮಯವಾಗಿ ಅವರು ವರ್ತಿಸುತ್ತಿದ್ದರು – 'ಸಂತೋಷಂ ಜನಯೇತ್ ಪ್ರಾಜ್ಞಃ, ತದೇವೇಶ್ವರಪೂಜನಮ್' ಎಂಬ ಆದರ್ಶಕ್ಕೆ ನಿದರ್ಶನವಾಗಿ.





(ಮೇಲಿನ ಚಿತ್ರ) ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಒಂದು ಕಾರ್ಯಕ್ರಮದಲ್ಲಿ (12.9.2010) ವಿದ್ವಾನ್ ಎನ್. ರಂಗನಾಥಶರ್ಮಾ, ಶತಾವಧಾನಿ ಡಾ॥ ರಾ. ಗಣೇಶ್.

(ಕೆಳಗಿನ ಚಿತ್ರ) ಸಂಸ್ಥೆಯ ಗ್ರಂಥಾಗಾರವನ್ನು ಅವಲೋಕಿಸುತ್ತಿರುವ ರಂಗನಾಥಶರ್ಮಾ; ಪಕ್ಕದಲ್ಲಿ ಎಸ್. ಆರ್. ರಾಮಸ್ವಾಮಿ.

## ಔಚಿತ್ಯಪ್ರಜ್ಞೆ

ಶರ್ಮರ ಪಾಂಡಿತ್ಯಕ್ಕಿಂತ ಅತಿಶಯದ್ದು ಎಂದು ನಮಗನಿಸುತ್ತಿದ್ದ ಅಂಶವೆಂದರೆ ಅವರ ಔಚಿತ್ಯದೃಷ್ಟಿ. "ಈ ಕವಿವಾಕ್ಯಕ್ಕೆ ಇಷ್ಟೇ ಅರ್ಥ", "ಈ ವಾಕ್ಯಕ್ಕೆ ಸ್ವಲ್ಪ ವ್ಯಾಪಕವಾಗಿ ಅರ್ಥ ಮಾಡುವುದು ಯುಕ್ತ" – ಇಂಥ ನಿರ್ಣಯಗಳನ್ನು ಅವರು ಮಂಥನ ಮಾಡಿ ಎಲೆಯಲ್ಲಿ ಬಡಿಸಿಬಿಡುತ್ತಿದ್ದರು.

ಎ. ಆರ್. ಕೃಷ್ಣಶಾಸ್ತ್ರಿಗಳ ಬಗೆಗೆ ಒಂದು ಸಲ ಯಾರೋ ಹೇಳಿದ್ದರು – 'ಇವರಿಗೆ ಯಾವ ವಿಷಯದಲ್ಲಿಯೂ ಸಂದೇಹವೇ ಇಲ್ಲವಲ್ಲ!' ಎಂದು. ಶರ್ಮರದೂ ಅದೇ ಜಾಯಮಾನ. ಮಿತ್ರರಾದ ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಆಗಾಗ ಹೇಳುತ್ತಿರುತ್ತಾರೆ – 'ನಮಗೆ ಇದಮಿತ್ಥಂ ಎಂದು ನಿರ್ಣಯ ಹೇಳುವ ಪಂಡಿತರು ಬೇಕಾಗಿದ್ದಾರೆ' ಎಂದು. ಶರ್ಮರು ಅಂಥವರು. ಈ ಅನ್ಯೂನಾಧಿಕತ್ವನಿಶ್ಚಯ ತುಂಬಾ ವಿಶೇಷವೆನ್ನಿಸುತ್ತದೆ. ಅವರಿಂದ ಪಾಠ ಹೇಳಿಸಿಕೊಳ್ಳುವುದು ಎಂದೂ ಶುಷ್ಕವೆನಿಸದೆ ನಮಗೆ ತುಂಬಾ ಆಸ್ವಾದ್ಯ ಅನುಭವವಾಗುತ್ತಿತ್ತು.

ಬರವಣಿಗೆಯನ್ನು ವೃತ್ತಿ ಮಾಡಿಕೊಂಡಿರುವ ನಾನು ಏನೇನೋ ಕಾರಣಗಳಿಂದ ಕೆಲವು ಶುದ್ಧವಲ್ಲದ ರೂಢಿಯ ಪ್ರಯೋಗಗಳನ್ನು ಅಪವಾದಾತ್ಮಕವಾಗಿ ಬಳಸುವುದುಂಟು. ಜನರಿಗೆ ಪರಿಚಿತವಾಗಿರುವುದು, ಪೆಡಸುತನವನ್ನು ತಪ್ಪಿಸಬೇಕಾಗಿರುವುದು, ರಚನೆಯ ನಡುನಡುವೆ ಹೊಂದಿಕೆಯಾಗಬೇಕಾದುದು, ಕನ್ನಡದ ಜಾಯಮಾನಕ್ಕೆ ಹೊಂದುವುದು – ಹೀಗೆ ನನ್ನದು ಏನೇನೋ ಲೆಕ್ಕಾಚಾರಗಳು. ನನ್ನ ತಪ್ಪು ಪ್ರಯೋಗಗಳು ಕಂಡಾಗ ಪಂಡಿತರು ಎಷ್ಟೋ ಸಲ "ನೀನೂ ಹೀಗೆ ಬರೆಯುತ್ತೀಯಾ?" ಎಂದು ಎಚ್ಚರಿಸುತ್ತಿದ್ದರು. ಆದರೆ ಅದನ್ನೆಲ್ಲ ಉದಾಸೀನ ಮಾಡುವ ಔದಾರ್ಯವನ್ನೂ ತೋರುತ್ತಿದ್ದರು. ಅವರ ಸ್ವರ್ಗವಾಸಕ್ಕೆ ಎರಡುವರ್ಷ ಹಿಂದಿನಷ್ಟು ಈಚೆಗೂ ಹೀಗೆ ಅವರ 'ಪ್ರಸಾದ' ನನಗೆ ಸಿಕ್ಕುತ್ತಿತ್ತು.

* * *

ಪಾಂಡಿತ್ಯದ ಒಂದು ಲಕ್ಷಣವೆಂದರೆ ರಾಜಿಯಿಲ್ಲದ ಶಾಸ್ತ್ರನಿಷ್ಠೆ ಎಂದು ಭಾವಿಸುವುದುಂಟು. ಆದರೆ ರಂಗನಾಥಶರ್ಮರನ್ನು ನೋಡುವಾಗ ನಮಗನ್ನಿಸುತ್ತಿದ್ದುದು ಅವರು ಗ್ರಂಥಾಕ್ಷರನಿಷ್ಠೆಯಿಂದ ಅತೀತರಾಗಿ ಸಮನ್ವಯಪಕ್ಷಪಾತಿಗಳಾಗಿದ್ದರು ಎಂದು. ಪಾಂಡಿತ್ಯದ ಪಕ್ವತೆಯ ಲಕ್ಷಣವೆಂದರೆ ಉದಾರತೆ ಮತ್ತು ಸಮಾಧಾನ ಎಂಬುದು ಅವರ ವರ್ತನೆಯಲ್ಲಿ ಎದ್ದುತೋರುತ್ತಿತ್ತು. ಪಂಡಿತವರ್ಗದಲ್ಲಿ ಹೆಚ್ಚಿನವರು ಗ್ರಂಥಾಕ್ಷರದ ಮಟ್ಟಕ್ಕಿಂತ ಮೇಲೆ ಹೋಗಲಾರರೆಂಬ ಅನುಭವದ ಹಿನ್ನೆಲೆಯಲ್ಲಿ ಶರ್ಮರ ಸಮನ್ವಯಪ್ರವಣತೆಯೂ ಪ್ರಶಾಂತಿಯ ಒಲವೂ ಪ್ರಾಧಾನ್ಯ ಪಡೆಯುತ್ತಿದ್ದುದನ್ನು ಗಮನಿಸುವುದು ಒಂದು ಹೃದ್ಯ ಅನುಭವವಾಗಿತ್ತು. ಅವರು ಪದೇಪದೇ ಉಚ್ಚರಿಸುತ್ತಿದ್ದ

ಒಂದು ಸೂತ್ರ 'ಸ್ಥಿತಸ್ಯ ಗತಿಶ್ಚಿಂತನೀಯಾ' ಎಂಬುದು. ಶಾಸ್ತ್ರವಾಙ್ಮಯದಲ್ಲಿ ಒಂದೊಂದೆಡೆ ಮೂಲಸಿದ್ಧಾಂತಕ್ಕೆ ಥಟ್ಟನೆ ಹೊಂದಿಕೆಯಾಗದೆನಿಸುವ ವಾಕ್ಯಗಳು ಇರುವುದು ವಿರಳವಲ್ಲ. ಅಂತಹ ಸಂದರ್ಭಗಳಲ್ಲಿ ಶರ್ಮರು ವ್ಯಾಖ್ಯಾನದ ಕಕ್ಷೆಯನ್ನು ಸ್ವಲ್ಪ ವಿಸ್ತರಿಸಿ ಸಿದ್ಧಾಂತ ಮತ್ತು ಪ್ರಸಕ್ತ ಗ್ರಂಥವಾಕ್ಯ – ಎರಡನ್ನೂ ರಕ್ಷಿಸಲು ತವಕಗೊಳ್ಳುತ್ತಿದ್ದರು. ಅವರ ಈ ಪ್ರವೃತ್ತಿಯನ್ನು ಹತ್ತಿರದಿಂದ ಕಂಡಾಗಲೆಲ್ಲ ಅವರ ಅಂತರಂಗವು ಸಹಜ ಮಿತಿಗಳಿಂದ ಆಚೆಗೆ ಸಾಗಿ ನಿರ್ದ್ವಂದ್ವದಲ್ಲಿ ಪರ್ಯವಸಾನ ಗೊಂಡಿತ್ತೆನಿಸುತ್ತಿತ್ತು. ಗ್ರಂಥಕ್ಕಿಂತ ಆಶಯ ದೊಡ್ಡದು, ವಿವಾದಾಂಶಕ್ಕಿಂತ ಪ್ರಶಾಂತಿ ದೊಡ್ಡದು – ಎಂಬ ಮೌಲ್ಯದ ಅನುಸಂಧಾನವನ್ನು ಶರ್ಮರಲ್ಲಿ ಸದಾ ಕಾಣುತ್ತಿದ್ದೆವು.

ಹೀಗೆಂದರೆ ಶಾಸ್ತ್ರಕ್ಲೇಶಗಳಿಂದ ಅವರು ಬದಿಗೆ ಸರಿಯುತ್ತಿದ್ದರೆಂದು ಭಾವಿಸ ಬೇಕಾದುದಿಲ್ಲ. ವಾಕ್ಯಾರ್ಥಸಂದರ್ಭಗಳಲ್ಲಿ ಸಂದಿಗ್ಧತೆ ಎದುರಾದಾಗ ಅವರ ತರ್ಕಕೌಶಲವು ಉಜ್ಜ್ವಲವಾಗಿ ಪ್ರಕಾಶಿಸುವುದನ್ನೂ ಕಾಣಬಹುದಿತ್ತು. ವ್ಯಾಕರಣ–ಅಲಂಕಾರಶಾಸ್ತ್ರಗಳ ಕೆಲವು ಸೂಕ್ಷ್ಮಾಂಶಗಳ ವಿಷಯದಲ್ಲಿ ಹುಟ್ಟಿಕೊಂಡಿದ್ದ ಅಭಿಮತಭೇದಗಳ ಸಂದರ್ಭದಲ್ಲಿ ಶರ್ಮರ ತರ್ಕಕೌಶಲದ ಪ್ರಜ್ವಲತೆಯನ್ನು ಕಂಡೆವು.

ಧರ್ಮಸ್ಥಳದ ಸರ್ವಧರ್ಮಸಮ್ಮೇಳನದಲ್ಲಿ ಒಮ್ಮೆ ವಿಷಯಮಂಡನೆ ಮಾಡುವಾಗ ಶರ್ಮರು –

> ಹರಿಹರಯೋರಿಹ ಭೇದಂ ಕಲಯತಿ ಮೂಢೋ ನ ವೈ ವಿದ್ವಾನ್ ।
> ಪ್ರಕೃತಿಸ್ತಯೋರಭಿನ್ನಾ ಪ್ರತ್ಯಯಭೇದಾದ್ದ್ವಿಧಾ ಭವತಿ ॥

ಎಂದು ಹೃದಯಂಗಮವಾಗಿ ಹೇಳಿದ್ದರು. 'ಹರ', 'ಹರಿ' ಎಂಬೆರಡು ಶಬ್ದಗಳೂ ಏಕೈಕಧಾತುಮೂಲದವೆಂಬ ಮತ್ತು ಕೇವಲ ಪ್ರತ್ಯಯಭೇದದಿಂದ ಒಂದೆಡೆ ಅಕಾರಾಂತವೂ ಇನ್ನೊಂದೆಡೆ ಇಕಾರಾಂತವೂ ಆಗಿದೆಯಷ್ಟೆ – ಎಂಬ ಶರ್ಮರ ನಿರ್ಣಯದಲ್ಲಿ ಕಾಣುವ ಮನಃಪಕ್ವತೆಯನ್ನು ಸಾಮಾನ್ಯ ಬಂಡಿಜಾಡಿನ ಅಕ್ಷರನಿಷ್ಠ ವಿದ್ವಾಂಸರಿಂದ ನಿರೀಕ್ಷಿಸಲಾಗದು. ಶರ್ಮರ ಈ ಉದಾತ್ತ ಭಂಗಿಯು ಪದೇಪದೇ ಕಾಣುತ್ತಿತ್ತು.

## ಸಮಾಜಾಭಿಮುಖ ಮನೋಭಂಗಿ

ಶರ್ಮರು ನೂರಕ್ಕೆ ನೂರರಷ್ಟು ಪರಂಪರಾನಿಷ್ಠರೆಂಬುದು ನಿಸ್ಸಂದೇಹ. ವಿದ್ವತ್ತಿನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೆಲವು ಗತಾನುಗತಿಕ ನಿಯಮಗಳಿವೆ. ವಿದ್ವಾಂಸರು ಯಾವ ಶಾಸ್ತ್ರದ ವೈದುಷ್ಯಕ್ಕಾಗಿ ಗುರುತಿಸಲ್ಪಟ್ಟಿರುತ್ತಾರೋ ಆ ಶಾಸ್ತ್ರದ ಪ್ರಾಕಾರದ ಹೊರಗಿನದಾವುದನ್ನೂ ಸ್ಪರ್ಶಿಸಬಾರದು ಎಂಬುದೂ ಅಂತಹ ನಿಯಮಗಳ ಲ್ಲೊಂದು.

ಆದರೆ ಒಂದು ದೃಷ್ಟಿಯಿಂದ ನಿರಾಕ್ಷೇಪಣೀಯವೆನ್ನಬಹುದಾದ ಈ ನಿಯಮಾನುಸರಣೆಯಲ್ಲಿ ಒಂದು ತೊಡಕು ಇದೆ. ಈಚಿನ ದಶಕಗಳಲ್ಲಿ ಸನಾತನ ಧರ್ಮಸಂಬಂಧಿಯಾದ ಎಲ್ಲ ಅಂಶಗಳ ಮೇಲೂ 'ಆಧುನಿಕ'ವೆಂದು ಸೋಗುಹಾಕಿದ ನಿರ್ಧರ್ಮೀಯರಿಂದ ನಿರಂತರ ಪ್ರಹಾರಗಳು ಎರಗುತ್ತಿವೆ. ಉನ್ನತ ಶಾಸ್ತ್ರಾಧಿಕಾರ ಪಡೆದವರ ಸಂಖ್ಯೆಯೇ ಕ್ಷೀಣಿಸಿರುವಾಗ, ನಮ್ಮಲ್ಲಿರುವ ಹಲವರೇ ಪಂಡಿತರು 'ನನ್ನ ಕ್ಷೇತ್ರ ವ್ಯಾಕರಣ ಮಾತ್ರ', 'ನಾನು ವೇದಾಂತನಿಷ್ಠ, ಬೇರೆ ವಿಷಯಗಳಲ್ಲಿ ಆಸಕ್ತಿ ತಳೆಯಲಾರೆ' – ಎಂಬ ರೀತಿಯ ಕೋಶಗತತ್ವಕ್ಕೆ ಬದ್ಧರಾಗಿ ಕುಳಿತರೆ ಆಕ್ರಮಣಕ್ಕೊಳಗಾಗಿರುವ ಧರ್ಮದ ಸಮರ್ಥನೆಗೆ ನಿಲ್ಲುವವರಾರು? ಶಿಷ್ಟ ಸಮಾಜಕ್ಕೆ ಕಾಲಸಂದರ್ಭಾನುಗುಣವಾಗಿ ಪ್ರಾಜ್ಞವಾಗಿ ಮಾರ್ಗದರ್ಶನ ಮಾಡಬಲ್ಲವರು ಯಾರು? ಸಮಾಜಹಿತದೃಷ್ಟಿಯು ಪಂಡಿತರುಗಳೂ ಸೇರಿದಂತೆ ಎಲ್ಲರಿಗೂ ಕರ್ತವ್ಯವಲ್ಲವೆ?

ಹೀಗೆ ಯೋಚಿಸಿ ತಮ್ಮ ತಾರುಣ್ಯಕಾಲದಿಂದಲೇ ಸಮಾಜಹಿತದೃಷ್ಟಿಯನ್ನೂ ಪ್ರಖರ ರಾಷ್ಟ್ರನಿಷ್ಠೆಯನ್ನೂ ಬೆಳೆಸಿಕೊಂಡಿದ್ದವರು ಶರ್ಮರು. ಅವರು ದಿನದಿನದ ರಾಜಕೀಯ–ಸಾಮಾಜಿಕ ವಿದ್ಯಮಾನಗಳ ಬಗೆಗೆ ಗಾಢ ಆಸಕ್ತಿಯನ್ನು ಆಜೀವವೂ ಉಳಿಸಿಕೊಂಡಿದ್ದರು. ಈ ಮಾನಸಿಕತೆ ಇದ್ದ ಕಾರಣದಿಂದ ಸಮಾಜದ ಬಗೆಗೆ ಅವರ ಮನಃಸ್ಪಂದನ ಆರೋಗ್ಯಕರ ರೀತಿಯದಾಗಿರುತ್ತಿತ್ತು. ದಿನಪತ್ರಿಕೆಯ ಓದು ಮತ್ತು ಆಕಾಶವಾಣಿ ವಾರ್ತೆಗಳ ಶ್ರವಣ ಅವರ ದಿನಚರಿಯ ಅಭಿನ್ನ ಭಾಗವಾಗಿದ್ದವು. ಈ ವಿಷಯದಲ್ಲಿ ಶರ್ಮರು ಮಾಮೂಲು ಸಾಂಪ್ರದಾಯಿಕ ಪಂಡಿತರಿಂದ ಭಿನ್ನ ಮನೋಭಂಗಿಯವರಾಗಿದ್ದರು.

ಕೆಲವು ವರ್ಷ ಶರ್ಮರು ಗೋಖಲೆ ಸಂಸ್ಥೆಯಿಂದ ಅನತಿದೂರದಲ್ಲಿದ್ದ ಮನೆಯೊಂದರ ಔಟ್‌ಹೌಸಿನಲ್ಲಿ ವಾಸ್ತವ್ಯವಿದ್ದರು. ಆಗ ಗೋಖಲೆ ಸಂಸ್ಥೆಯಲ್ಲಿ ನಡೆಯುತ್ತಿದ್ದ ಹೆಚ್ಚಿನ ಕಾರ್ಯಕ್ರಮಗಳು ಆಡಳಿತ, ರಾಜ್ಯಾಂಗ, ಆರ್ಥಿಕ ಆಗುಹೋಗುಗಳು, ಕಾನೂನು, ವಿದೇಶಾಂಗನೀತಿ – ಇಂತಹ ವಿಷಯಗಳಿಗೆ ಸಂಬಂಧಿಸಿರುತ್ತಿದ್ದವು. ಈ ವಿಷಯಗಳೆಲ್ಲ ಶರ್ಮರ ಸ್ವಕ್ಷೇತ್ರವಲಯದವೇನಲ್ಲ. ಆದರೂ ಇಂತಹ ಉಪನ್ಯಾಸಗಳನ್ನು ಕೇಳುವುದಕ್ಕೂ ಶರ್ಮರು ತಪ್ಪದೆ ಬಂದು ಕುಳಿತಿರುತ್ತಿದ್ದರು. ದೇಶದ ಸನ್ನಿವೇಶದ ಬಗೆಗೆ ಯಾವುದೋ ಒಂದಷ್ಟು ನನಗೆ ತಿಳಿಯದ ಅಂಶಗಳು ಕಿವಿಗೆ ಬಿದ್ದರೆ ಬೀಳಲಿ – ಎಂದು ಅವರು ಯೋಚಿಸಿರಬಹುದು. ಇದಕ್ಕಿಂತ ಮಿಗಿಲಾಗಿ, ತಾವು ಗೋಖಲೆ ಸಂಸ್ಥೆಯ ಭಾಗವಾಗಿದ್ದುದರಿಂದ ಅದರ ಆದಷ್ಟೂ ಕಲಾಪಗಳಲ್ಲಿ ಆಸಕ್ತನಾಗಿರಬೇಕು ಎಂಬ ಶ್ರದ್ಧೆ ಅವರಲ್ಲಿ ರಕ್ತಗತವಾಗಿತ್ತು.

"ಸಾಹಿತ್ಯಲೋಕದ ಸಂಚಾರದಲ್ಲಿ ಶರ್ಮರದು ಧೀರೋದಾರ ನಡೆ" ಎಂಬ ರಾ. ಗಣೇಶ್ ಅವರ ವರ್ಣನೆ ಯಥಾರ್ಥವಾಗಿದೆ.

## ಲೋಕಪ್ರೇಮ

ಇದನ್ನು ಹೆಚ್ಚು ವಿಸ್ತರಿಸುವ ಆವಶ್ಯಕತೆ ಇಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಶರ್ಮರು ಸುತ್ತಲಿನ ಸಮಾಜವನ್ನು ಹಾರ್ದವಾಗಿ ಪ್ರೀತಿಸಿದರು. ವಿದ್ವತ್ತಿನ ಕಾರ್ಯ, ಪಠನ ಪಾಠನಾದಿಗಳು, ಪ್ರವಚನಗಳ ಮೂಲಕ ಉದ್ಬೋಧನ, ವಿಪುಲ ಸಾಹಿತ್ಯಸೃಷ್ಟಿ, ಆಗಿಂದಾಗ ಉದಿಸುವ ಸಂಪ್ರದಾಯಸಂಬಂಧಿತ ಸಮಸ್ಯೆಗಳ ವಿಷಯದಲ್ಲಿ ಶಾಸ್ತ್ರನಿಷ್ಠವಾದ ಆದರೆ ಯುಗಾನುಕೂಲವಾದ ಅಭಿಪ್ರಾಯಮಂಡನೆ; – ಶರ್ಮರು ನಿರಂತರ ನಡೆಸಿದ ಈ ಸಮಸ್ತ ಕಲಾಪಗಳಿಗೂ ಮೂಲಪ್ರೇರಣೆಯಾಗಿ ಕೆಲಸ ಮಾಡಿದುದು ಅವರ ಆಳವಾದ ಸಮಾಜಪ್ರೇಮವೇ ಎನಿಸುತ್ತದೆ. ಇದು ಡಿ.ವಿ.ಜಿ. ಒಡನಾಟದಿಂದ ಇನ್ನಷ್ಟು ದೃಢಗೊಂಡಿದ್ದಿರಬೇಕು.

ಶರ್ಮರು ಸದಾ ಎಷ್ಟುಮಟ್ಟಿಗೆ ಯಾವುದೊ ಚಿಂತನೆ ಅಧ್ಯಯನ–ಬರಹದಲ್ಲಿ ಮಗ್ನರಾಗಿರುತ್ತಿದ್ದರೆಂದರೆ, ಅವರನ್ನು ನಿರ್ನಿಮಿತ್ತವಾಗಿ ಕುಶಲಕ್ಕಾಗಿ ಭೇಟಿ ಮಾಡಲು ಹೋದರೆ ನಮಗೇ ಸಂಕೋಚವಾಗುತ್ತಿತ್ತು – ಅವರಿಗೆ ತಪೋಭಂಗ ಮಾಡುತ್ತಿದ್ದೇವೇನೊ ಎಂದು. ಆದರೆ ಅವರು ಎಂದೂ ನಮ್ಮಂತಹವರ ಭೇಟಿಯನ್ನು ವಿಕ್ಷೇಪವೆಂದು ಭಾವಿಸುತ್ತಿರಲಿಲ್ಲ. ಪ್ರತಿಯಾಗಿ ಸಂತಸವನ್ನೇ ವ್ಯಕ್ತಪಡಿಸುತ್ತಿದ್ದರು; ಎಲ್ಲ ಸಂಬಂಧಿತ ಕಾರ್ಯಗಳ ಬಗೆಗೂ ವ್ಯಕ್ತಿಗಳ ಬಗೆಗೂ ವಿಚಾರಿಸಿ ತಿಳಿದುಕೊಳ್ಳುತ್ತಿದ್ದರು. ಅಂದೇ ಬೆಳಗಿನ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ ಮುಖ್ಯ ವಿಷಯಗಳನ್ನು ಪ್ರಸ್ತಾವಿಸುತ್ತಿದ್ದರು, ಪರಾಮರ್ಶನೆಯನ್ನೂ ಮಾಡುತ್ತಿದ್ದರು. ದೇಶದ ಮತ್ತು ಸಮಾಜದ ಆಗುಹೋಗುಗಳನ್ನು ಗಮನಿಸುವುದು ನಾಗರಿಕ ಪ್ರಜೆಯ ಕರ್ತವ್ಯವೆಂದು ನಂಬಿ ಹಾಗೆ ನಡೆದುಕೊಳ್ಳುತ್ತಿದ್ದವರು ಅವರು.

ತಮ್ಮ ಪಾಂಡಿತ್ಯದ ಪ್ರಯೋಜನ ಸಮಾಜಕ್ಕೆ ಆಗಬೇಕು ಎಂಬುದು ಶರ್ಮರ ಆಧಾರ ಜೀವನಪ್ರಣಾಳಿಯೇ ಆಗಿತ್ತು. ಯಾರ ಬೇಡಿಕೆಯನ್ನೂ ತಿರಸ್ಕರಿಸುತ್ತಿರಲಿಲ್ಲ. ಯಾವುದೋ ಕಾರ್ಯಕ್ರಮಕ್ಕೆ ಬರುವಂತೆ ಆಮಂತ್ರಣ, ಎಲ್ಲಿಯೋ ಉಪನ್ಯಾಸ ನೀಡಬೇಕೆಂಬ ಬೇಡಿಕೆ, ಯಾವುದೋ ಸಾಂದರ್ಭಿಕ ಪ್ರಕಟಣೆಗೆ ಲೇಖನ ಬೇಕೆಂಬ ಕೋರಿಕೆ, ಯಾರದೋ ಬರಹವನ್ನು ನೋಡಿ ಪರಿಷ್ಕರಿಸಿ ಕೊಡಬೇಕೆಂಬ ಪ್ರಾರ್ಥನೆ; – ಇಂತಹ ಕೆಲಸಗಳನ್ನು ಅವರ ಯೋಜಿತ ಕಾರ್ಯಗಳ ಒತ್ತಡದ ನಡುವೆಯೂ ಪೂರೈಸುತ್ತಿದ್ದುದು ಮಾತ್ರವಲ್ಲದೆ ಅದನ್ನು ಸುಮುಖರಾಗಿಯೂ ಅಚ್ಚುಕಟ್ಟಾಗಿಯೂ ಮಾಡುತ್ತಿದ್ದರು. ಎಷ್ಟೇ ಸಣ್ಣ ಅಥವಾ ಆಗಂತುಕ ಕೆಲಸವಾಗಲಿ ಅದನ್ನು ಆತ್ಯಂತಿಕ ಶ್ರದ್ಧೆಯಿಂದ ಮಾಡುವುದು ಅವರಿಗೆ ಸ್ವಭಾವಗತವಾಗಿದ್ದಿತು. ಸಣ್ಣ ಕೆಲಸವೆಂದೋ ತಮ್ಮದಲ್ಲದ ಕೆಲಸವೆಂದೋ ಎಂದೂ ಉಪೇಕ್ಷೆ ತೋರಿದವರಲ್ಲ. ಪರಿಷ್ಕಾರಶ್ರದ್ಧೆಗೆ ಇನ್ನೊಂದು ಹೆಸರೆಂದರೆ ರಂಗನಾಥಶರ್ಮರು. ಅವರ ಈ ಕಾರ್ಯಶ್ರದ್ಧೆಯನ್ನು

ವರ್ಷಗಳುದ್ದಕ್ಕೂ ಸಮೀಪದಿಂದ ನೋಡಿದ್ದ ನಮ್ಮಂತಹವರಿಗೆ ಅದು ಆದರ್ಶವೆಂದೂ ಅನುಕರಣೀಯವೆಂದೂ ಅನ್ನಿಸುತ್ತಿದ್ದುದು ಸಹಜ. ಹೀಗೆ ಶರ್ಮರು ಅನುದ್ದಿಷ್ಟವಾಗಿಯೆ ನಮಗೆಲ್ಲ 'ಕಾನ್‌ಷನ್ಸ್ ಕೀಪರ್' ಆಗಿಬಿಟ್ಟಿದ್ದರು.

ಸಣ್ಣದಾದರೂ ಶರ್ಮರ ಸ್ವಭಾವದ ದ್ಯೋತಕವಾಗಿರುವುದರಿಂದ ಒಂದು ಘಟನೆಯನ್ನು ಸ್ಮರಿಸಬಹುದು. ರಾಷ್ಟ್ರೋತ್ಥಾನ ಪರಿಷತ್ತು ಕನ್ನಡದ ಒಂದಷ್ಟು ದೇಶಭಕ್ತಿಗೀತೆಗಳ ಧ್ವನಿಮುದ್ರಣವೊಂದನ್ನು ಹೊರತರಬಯಸಿತ್ತು. ಹಾಡುಗಳ ಸಂಗ್ರಹ, ಗಾಯನ ಧ್ವನಿಮುದ್ರಣದ ಸಂಯೋಜನೆ ಆಗಿತ್ತು. ಆ ಹಂತದಲ್ಲಿ ನನಗನಿಸಿತು – ಆ ಹಾಡುಗಳಿಗೆ ಪೂರಕವಾಗಿ ರಾಷ್ಟ್ರಪುರುಷವಂದನೆಯ ರೀತಿಯ ಕೆಲವು ಸಂಸ್ಕೃತ ಶ್ಲೋಕಗಳನ್ನು ಸೇರಿಸಿದರೆ ಚೆನ್ನಾಗಿರುತ್ತದೆ – ಎಂದು. ಆದರೆ ಅಂತಹ ಶ್ಲೋಕಗಳನ್ನು ರಚಿಸಿಕೊಡುವವರು ಬೇಕಲ್ಲ! ಕೂಡಲೆ ನನಗೆ ಹೊಳೆದ ಮೊದಲ ಮತ್ತು ಒಂದೇ ಹೆಸರು ರಂಗನಾಥಶರ್ಮರದು. ಹೇಗೂ ಅವರು ರಾಷ್ಟ್ರೋತ್ಥಾನ ಪರಿಷತ್ತಿಗೆ ಆರಂಭದ ದಿನಗಳಿಂದ ನಿಕಟವರ್ತಿಗಳಾಗಿದ್ದವರು. ಅವರಲ್ಲಿಗೆ ಧಾವಿಸಿದೆ.

ಅವರು ಯಾವುದೊ ಗಂಭೀರ ಬರಹದಲ್ಲಿ ತೊಡಗಿದ್ದು ಮೂಲಗ್ರಂಥಗಳನ್ನು ಹರಡಿಕೊಂಡು ಯಾವುದೋ ಅಂಶಗಳ ಪರಿಷ್ಕರಣದ ದೃಷ್ಟಿಯಿಂದ ಇಬ್ಬರು ಪರಿಚಿತರೊಡನೆ ಸಮಾಲೋಚನೆ ನಡೆಸುತ್ತಿದ್ದರು. ಆ ಸನ್ನಿವೇಶದಲ್ಲಿ ಅವರಿಗೆ ತೊಂದರೆ ಕೊಡಲು ನನಗೆ ಸಂಕೋಚವಾಯಿತು. "ಒಂದು ಸಣ್ಣ ಉಪಕಾರ ಆಗಬೇಕಾಗಿತ್ತು. ಮತ್ತೆ ಬರುತ್ತೇನೆ" ಎಂದು ಹೇಳಿ ಎದ್ದುನಿಂತೆ. ಆದರೆ ಶರ್ಮರು ಬಿಡಬೇಕಲ್ಲ! "ನೀವು ಬಂದಿದ್ದೀರೆಂದರೆ ಒಳ್ಳೆಯ ಕಾರ್ಯಕ್ಕಾಗಿಯೆ ಬಂದಿರುತ್ತೀರಿ. ನಮ್ಮ ಈ ಪ್ರಪಂಚ ಸದಾ ನಡೆದಿರುವುದೇ. ವಿಷಯ ಹೇಳಿರಿ" ಎಂದರು. ಅವರ ಉತ್ತೇಜನದಿಂದ ನನ್ನ ಸಂಕೋಚ ಮರೆಯಾಗಿ, "ರಾಷ್ಟ್ರಭಕ್ತಿಪ್ರಕಾಶಕವಾದ ಕೆಲವು ಸಂಸ್ಕೃತ ಶ್ಲೋಕಗಳು ತುರ್ತಾಗಿ ಬೇಕಾಗಿದೆ. ಹಿಂದೆಯೂ ಇಂತಹ ಎಷ್ಟೋ ಸಂದರ್ಭಗಳಲ್ಲಿ ತಾವು ನಮಗೆ ನೆರವಾಗಿದ್ದೀರಿ" ಎಂದೆ.

ಶರ್ಮರು ಮುಗುಳ್ನಕ್ಕು, "ಇದನ್ನು ಕೇಳಲು ಇಷ್ಟು ದೀರ್ಘಕಾಲದ ಪರಿಚಿತರಾದ ನೀವು ಸಂಕೋಚಪಡಬೇಕೆ! ಇದಕ್ಕಿಂತ ಹೆಚ್ಚಿನ ಕರ್ತವ್ಯ ನನಗೆ ಏನಿದ್ದೀತು? ಅವಶ್ಯ ಮಾಡೋಣವಂತೆ. ನಾಳೆಯೇ ಬೆಳಗ್ಗೆ ಬನ್ನಿರಿ" ಎಂದರು.

ಮರುದಿನ ಬೆಳಗ್ಗೆ ಹೋಗುವ ವೇಳೆಗೆ ನಮಗೆ ಅವಶ್ಯವಿದ್ದ ಸಂಸ್ಕೃತ ಪದ್ಯಗಳನ್ನು ರಚಿಸಿ ಸ್ಫುಟವಾಗಿ ಪ್ರತಿಮಾಡಿ ಇರಿಸಿದ್ದರು.

ನಮಗೆ ಯಾವುದೇ ಶಾಸ್ತ್ರವಿಷಯದ ಬಗೆಗಾಗಲಿ ಭಾಷಾಪ್ರಯೋಗದ ವಿಷಯದಲ್ಲಾಗಲಿ ಶಂಕೆ ತೋರಿದರೆ ಶರ್ಮರಲ್ಲಿಗೆ ಧಾವಿಸುವುದು ಅಭ್ಯಾಸ ಆಗಿಬಿಟ್ಟಿತ್ತು.

## ಮೌಲ್ಯನಿಷ್ಠೆ

ಶರ್ಮರಿಂದ ದೋಹದ ಪಡೆದ ಸಂಸ್ಥೆಗಳು ಹಲವಾರು : ರಾಷ್ಟ್ರೋತ್ಥಾನ ಪರಿಷತ್, ಕನ್ನಡ ಸಾಹಿತ್ಯ ಪರಿಷತ್, ಸಂಸ್ಕೃತಭಾರತೀ, ಸುರಸರಸ್ವತೀಸಭಾ – ಇತ್ಯಾದಿ. ವಿವಿಧ ಸಂಪ್ರದಾಯಗಳ ಹಲವಾರು ಪ್ರಮುಖ ಮಠಗಳೂ ಶರ್ಮರಿಂದ ಯೋಗದಾನ ಪಡೆದಿವೆ.

ರಾಷ್ಟ್ರೋತ್ಥಾನ ಪರಿಷತ್ತಿನ ಬಗೆಗೆ ದಶಕಗಳುದ್ದಕ್ಕೂ ಏಕರೀತಿಯ ಅಭಿಮಾನ ತೋರಿದವರು ಶರ್ಮರು. ಪರಿಷತ್ತಿನ ಯಾವುದೇ ಬೇಡಿಕೆಯನ್ನು ಶರ್ಮರು ನಿರಾಕರಿಸಿದುದಿಲ್ಲ. 'ಭಾರತ–ಭಾರತಿ' ಮಾಲಿಕೆಗೆ ಪುಸ್ತಕಗಳನ್ನು ಬರೆದುಕೊಟ್ಟರು. ಇಪ್ಪತ್ತೈದು ವರ್ಷಕಾಲ 'ಉತ್ಥಾನ' ಪತ್ರಿಕೆಗೆ 'ಸೂಕ್ತಿ–ವ್ಯಾಪ್ತಿ' ಅಂಕಣವನ್ನು ಬರೆದುಕೊಟ್ಟರು. ಅಪೇಕ್ಷಿಸಿದಾಗಲೆಲ್ಲ ಲೇಖನಗಳನ್ನು ಬರೆದುಕೊಟ್ಟರು. ಇತರರ ಬರಹಗಳ ಪರಿಷ್ಕರಣದಲ್ಲಿಯೂ ಅವರ ನೆರವು ಸದಾ ಸಿದ್ಧವಿರುತ್ತಿತ್ತು.

1975ರಲ್ಲಿ ತುರ್ತುಪರಿಸ್ಥಿತಿಯಲ್ಲಿ ಸರ್ಕಾರವು ರಾಷ್ಟ್ರೋತ್ಥಾನ ಪರಿಷತ್ತಿಗೆ ಬೀಗಮುದ್ರೆ ಹಾಕಿದಾಗ ಅದು ಖಂಡನೀಯ ಕ್ರಮವೆಂದು ಬಹಿರಂಗ ಹೇಳಿಕೆ ಕೊಟ್ಟ ಮೊದಲಿಗರು ಶರ್ಮರು – ಅವರು ಸರ್ಕಾರೀ ಸೇವೆಯಲ್ಲಿದ್ದರೂ ಸಹ. ಶರ್ಮರ ಮೌಲ್ಯನಿಷ್ಠೆಗೆ ಇಂತಹ ಹಲವು ನಿದರ್ಶನಗಳನ್ನು ಕೊಡಬಹುದು.

ಶರ್ಮರ ವ್ಯಕ್ತಿತ್ವದ ಯಾವ ಮುಖವನ್ನು ಪರಿಶೀಲಿಸಿದರೂ ಬೇರೆಬೇರೆ ಆವಶ್ಯಕತೆಗಳನ್ನು ಅವರು ತಮ್ಮಲ್ಲಿ ಬುದ್ಧಿಪೂರ್ವಕ ಸಮನ್ವಯ ಮಾಡಿಕೊಂಡಿದ್ದುದು ಎದ್ದುಕಾಣುತ್ತಿತ್ತು. ಈ ಸ್ಥಿರತೆಯ ಕಾರಣದಿಂದ ಅವರು ಅಂತರಂಗದಲ್ಲಿ ಪ್ರಶಾಂತ ರಾಗಿರುತ್ತಿದ್ದರು. ಪ್ರಶಾಂತಿ ಇದ್ದಲ್ಲಿ ರಾಸಿಕ್ಯ, ವಿನೋದಪ್ರಿಯತೆಗಳೂ ಸಹಜವಾಗಿ ಹೊಮ್ಮುತ್ತವೆ. ಹೀಗೆ ಶರ್ಮರಲ್ಲಿ ಗಾಢ ಪಾಂಡಿತ್ಯದ ಉಪಸ್ಥಿತಿ, ಬರಡಲ್ಲದ ಸರಸತೆ – ಎರಡೂ ಎದ್ದುತೋರುತ್ತಿದ್ದವು.

ವಯಸ್ಸು 90 ದಾಟಿದ ಮೇಲೆ ಅವರು ಮೈಸೂರು ವಾಸ್ತವ್ಯದಲ್ಲಿ ಇದ್ದ ದಿನಗಳಲ್ಲಿ ಅವರಿಗೆ ನಮನ ಸಲ್ಲಿಸಲು ಹೋದಾಗ ಮಾತುಕತೆಯ ನಡುವೆ ಅವರು ಹೇಳಿದ ಒಂದು ಮಾತು ಮರೆಯಲಾಗದುದು :

"ನನ್ನ ಇಷ್ಟು ವರ್ಷದ ಜೀವನದಲ್ಲಿ ನಾನು ಒಂದು ನಿಮಿಷವನ್ನೂ ವ್ಯರ್ಥ ಮಾಡಲಿಲ್ಲ – ಎಂಬ ಸಮಾಧಾನ ಇದೆ."

ಹೀಗೆ ವಿಶ್ವಾಸದಿಂದ ಹೇಳಬಲ್ಲ ಸ್ಥಿತಿಯಲ್ಲಿರುವವರು ತುಂಬಾ ವಿರಳವೆನ್ನಬೇಕಾಗಿದೆ. ಶರ್ಮರು ಅಷ್ಟೊಂದು ಅಗಾಧಪ್ರಮಾಣದ, ವೈವಿಧ್ಯಮಯವಾದ, ಶಾಸ್ತ್ರಶುದ್ಧವಾದ ಮತ್ತು ಸಾರಸ್ವತಲೋಕಕ್ಕೆ ಅತ್ಯವಶ್ಯವಾಗಿ ಬೇಕಾಗಿದ್ದ ಗ್ರಂಥರಾಶಿಯನ್ನು ನಿರ್ಮಿಸಿದುದು

ಹೇಗೆ ಶಕ್ಯವಾಯಿತು ಎಂಬುದಕ್ಕೆ ವಿವರಣೆ ಅವರ ಶ್ರದ್ಧಾನೈರಂತರ್ಯದಲ್ಲಿ ಕಾಣುತ್ತದೆ.

## ಧರ್ಮಪೀಠದ ಆದರಣೆ

ರಂಗನಾಥಶರ್ಮರು ತಮ್ಮ ಸಾಧನೌನ್ನತ್ಯದ ಕಾರಣದಿಂದಾಗಿ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠದ ವಿದ್ಯಮಾನ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳೂ ಸೇರಿದಂತೆ ಹಲವಾರು ಮಹೋನ್ನತರ ಆದರಣೆಗೆ ಪಾತ್ರರಾದದ್ದು ಸ್ವಾಭಾವಿಕ.

ಪೂಜ್ಯ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳಿಗೆ ರಂಗನಾಥಶರ್ಮರ ಬಗೆಗೆ ಇದ್ದ ಗೌರವವೂ ಸ್ವಾಮಿಗಳ ಬಗೆಗೆ ರಂಗನಾಥಶರ್ಮರಿಗೆ ಇದ್ದ ಪೂಜ್ಯಭಾವನೆಯೂ ಅತಿಶಯ ರೀತಿಯವು. ಶರ್ಮರ ವಯಸ್ಸು 80 ದಾಟಿದ್ದಾಗ ಮಹಾಸ್ವಾಮಿಗಳಿಂದ ಆದೇಶ ಬಂದಿತು – ಶರ್ಮರು ಮಾಧವೀಯ ಶ್ರೀಮತ್ ಶಂಕರದಿಗ್ವಿಜಯವನ್ನು ಕನ್ನಡಕ್ಕೆ ಅನುವಾದಿಸಬೇಕೆಂದು. ಮೊದಲನೆಯದಾಗಿ ಶಂಕರದಿಗ್ವಿಜಯ ಸುಲಭ ಗ್ರಂಥವಲ್ಲ; ಹದಿನಾರು ಸರ್ಗಗಳಷ್ಟು ವಿಸ್ತಾರವೂ ಆದದ್ದು. ಅಲ್ಲಲ್ಲಿ ಶಾಸ್ತ್ರೀಯ ವಿವೇಚನೆಯನ್ನು ಗರ್ಭೀಕರಿಸಿಕೊಂಡ ಜಟಿಲ ಭಾಗಗಳೂ ಇವೆ. ಶರ್ಮರ ವಯಃಸ್ಥಿತಿ ಅಷ್ಟು ದೊಡ್ಡ ಕೆಲಸಕ್ಕೆ ಅನುಕೂಲಕರವಿರಲಿಲ್ಲ. ಆರೋಗ್ಯ ಸಮಸ್ಯೆಗಳೂ ಇದ್ದವು.

ಈ ಸನ್ನಿವೇಶವನ್ನು ಶರ್ಮರು ವಿನಮ್ರರಾಗಿ ಮಹಾಸ್ವಾಮಿಗಳಿಗೆ ಅರಿಕೆ ಮಾಡಿ ಪತ್ರ ಬರೆದರು. ಮಹಾಸ್ವಾಮಿಗಳಾದರೋ ಮರು–ಉತ್ತರ ಬರೆದರು : "ಅನುವಾದದ ಕೆಲಸ ಕಷ್ಟದ್ದಾದ ಕಾರಣದಿಂದಲೇ ತಮ್ಮನ್ನು ಪ್ರಾರ್ಥಿಸಬೇಕಾಯಿತು ಪಂಡಿತರೇ! ಬರವಣಿಗೆಗೆ ಬೇಕಾದ ಸಹಾಯಕರನ್ನು ತಮಗೆ ಏರ್ಪಡಿಸಿಕೊಡುತ್ತೇವೆ. ಈ ಅನುವಾದಕಾರ್ಯ ತಮ್ಮಿಂದಲೇ ಆಗಬೇಕು." ಅದರಂತೆ ನಡೆಯಿತು.

ಇನ್ನೊಂದು ಪ್ರಸಂಗವೂ ಸ್ಮರಣೀಯ. ಶ್ರೀಶಂಕರಭಗವತ್ಪಾದರ ಜೀವನವನ್ನು ಕುರಿತು ಶರ್ಮರು 'ಶ್ರೀಶಂಕರಚರಿತಾಮೃತಮ್' ಎಂಬ ಮನನೀಯ ಕಾವ್ಯವನ್ನು ರಚಿಸಿದ್ದಾರಷ್ಟೆ. ಪೂಜ್ಯ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಆ ಕಾವ್ಯವನ್ನು ಶರ್ಮರ ಮುಖದಿಂದಲೇ ಕೇಳಲು ಅಪೇಕ್ಷೆಪಟ್ಟರು. ಅದಕ್ಕಿಂತ ಭಾಗ್ಯ ಏನಿದ್ದೀತು? ಪಂಡಿತರು ಶೃಂಗೇರಿಗೆ ತೆರಳಿದರು. ವಾಚನ–ಶ್ರವಣಕ್ಕೆ ಹಲವು ದಿನಗಳೇ ಹಿಡಿದವು. ಈ ಕಲಾಪ ನಡೆಯುತ್ತಿದ್ದುದು ವಸತಿಯ ಮಹಡಿಯ ಮೇಲಿನ ಶ್ರೀಗಳ ಸಾನ್ನಿಧ್ಯದಲ್ಲಿ. ಆರಂಭದ ಎರಡು ದಿನಗಳು ಆದ ಮೇಲೆ ಮೂರನೇ ದಿನ ಪಂಡಿತರು ಅಲ್ಲಿಗೆ ಹೋದಾಗ ಸಹಾಯಕರೊಬ್ಬರು ಅವರನ್ನು ಕೆಳಭಾಗದಲ್ಲಿಯೆ ಇದ್ದ ವಿಶಾಲ ಕೋಣೆಯೊಂದಕ್ಕೆ ಕರೆದೊಯ್ದರು. ಶ್ರೀಗಳು ಅಲ್ಲಿ ಆಗಲೇ ಆಸೀನರಾಗಿದ್ದರು. ಅವರು ಪಂಡಿತರನ್ನು

ಕಂಡು ಮುಗುಳ್ನಕ್ಕು "ಈ ವಯಸ್ಸಿನಲ್ಲಿ ತಾವು ಮಹಡಿ ಮೆಟ್ಟಿಲು ಹತ್ತುವ ಶ್ರಮ ಬೇಡವೆಂದು ಈ ಏರ್ಪಾಡನ್ನು ಮಾಡಿಸಲಾಗಿದೆ. ಇಂದಿನಿಂದ ತಮ್ಮ ವಾಚನ ಇಲ್ಲಿಯೆ ಮುಂದುವರಿಯುತ್ತದೆ." ಮಹಾಸ್ವಾಮಿಗಳ ಕಾರುಣ್ಯ ಕಂಡು ಗದ್ಗದಿತರಾಗಿ ಶರ್ಮರು ಅವರಿಗೆ ದೀರ್ಘದಂಡಪ್ರಣಾಮ ಮಾಡಿ ಕುಳಿತು ವಾಚನವನ್ನು ಆರಂಭಿಸಿದರು.

## ಅನುಭವೋಕ್ತಿಗಳು

ಶರ್ಮರ ಸಾಮಾನ್ಯ ಮಾತುಕತೆಗಳಲ್ಲಿಯೂ ಆಗಾಗ ಹೊಮ್ಮುತ್ತಿದ್ದ ಒಳನೋಟಗಳು ಮಾರ್ಮಿಕವಾಗಿರುತ್ತಿದ್ದವು. ಒಮ್ಮೆ ರಾ. ಗಣೇಶ್ ಕುತೂಹಲದಿಂದ "ತಾವು ಯಾವಾವ ಅಲಂಕಾರಶಾಸ್ತ್ರಗ್ರಂಥಗಳನ್ನು ವಿವರವಾಗಿ ಅಭ್ಯಾಸ ಮಾಡಿದ್ದೀರಿ?" ಎಂದು ಕೇಳಿದಾಗ ಶರ್ಮರು ಪ್ರಶ್ನೆಯ ಧಾರ್ಷ್ಟ್ಯದ ಬಗೆಗೆ ಸ್ವಲ್ಪವೂ ಅಸಮಾಧಾನಗೊಳ್ಳದೆ ಹೇಳಿದರು – "ಹಲವು ಪ್ರಮುಖ ಶಾಸ್ತ್ರಗ್ರಂಥಗಳನ್ನು ಓದಿಕೊಂಡಿದ್ದೇನೆ. ಶಾಸ್ತ್ರಕ್ಕೆ ಸಂಬಂಧಿಸಿದ ಎಷ್ಟೋ ಗ್ರಂಥಗಳು ವಿಸ್ತೃತಾಧ್ಯಯನಕ್ಕೆ ಅರ್ಹಗಳಾಗೇನೂ ಇರುವುದಿಲ್ಲ, ಅಲ್ಲವೆ?" ಎಂದಿದ್ದರು.

ಅವರು ಸ್ವಭಾವಗತವಾಗಿ ಆಡುತ್ತಿದ್ದ ಇಂತಹ ಮಾತುಗಳಲ್ಲಿ ಅನುಭವಸಾಂದ್ರತೆ ಇರುತ್ತಿತ್ತು. ಅವರು ಪದೇಪದೇ ಆಡುತ್ತಿದ್ದ ಒಂದು ಮಾತು ಲೋಕದ ಒಂದು ಕಹಿ ವಾಸ್ತವವನ್ನು ಪ್ರಕಟಪಡಿಸುತ್ತದೆ : "ವಿವೇಕಕ್ಕೆ ಒಂದು ಮಿತಿಯೂ ಅವಧಿಯೂ ಇರುತ್ತದೆ. ಆದರೆ ಅವಿವೇಕಕ್ಕೆ ಎಲ್ಲೆಯೇ ಇರುವುದಿಲ್ಲ; ಅದು ಅಪರಿಮಿತ!"

ಅವರ ಇಂತಹ ಉಕ್ತಿಗಳು ಅವಿಸ್ಮರಣೀಯ:

"ರಾತ್ರಿ ಮಲಗಿ ಬೆಳಗ್ಗೆ ಏಳುವಷ್ಟರಲ್ಲಿ ಗಪ್ ಅಂತ ಹೋಗಿಬಿಡಬೇಕ್ರಿ!"

"ಅಯ್ಯೋ ಎಂದಷ್ಟು ಸುಲಭವಾಗಿ 'ರಾಮ' ಎಂದು ಹೇಳಲು ಆಗುವುದಿಲ್ಲವಲ್ಲ!"

"ನಾನು ದೀರ್ಘಾಯುಷ್ಯ ಬೇಡವೆಂದು ಹೇಳುವುದಿಲ್ಲ. ಆದರೆ ಆರೋಗ್ಯವೂ ಇದ್ದರೆ ಮಾತ್ರ ದೀರ್ಘಾಯುಷ್ಯ ಇರಲಿ ಎಂಬುದು ನನ್ನ ಇಚ್ಛೆ."

ವಯಸ್ಸು 80 ದಾಟಿದ ಮೇಲೆ ಅವರು ಆಗಿಂದಾಗ ಹೇಳುತ್ತಿದ್ದ ಮಾತು – "ಶಿರೋಭಾಗದಲ್ಲಿ ಶಾಂಕರಭಾಷ್ಯ, ಕೈಯಲ್ಲಿ ಅಷ್ಟಾಧ್ಯಾಯೀ, ಎದೆಯ ಮೇಲೆ ವಾಲ್ಮೀಕಿರಾಮಾಯಣ – ಈ ಸ್ಥಿತಿಯಲ್ಲಿ ಹೋಗಿಬಿಡಬೇಕ್ರಿ!"

"ಯಾವತ್ತು ನಾನು ವ್ಯಾಕರಣವನ್ನು ಮರೆಯುತ್ತೇನೆಯೋ ಆವತ್ತು ನಾನು ಬದುಕಿರಬಾರದು."

ವಾಸ್ತವವಾಗಿ ಹೀಗೆಯೇ ನಡೆದದ್ದು ಒಂದು ವಿಷಾದಮಯ ಸಂಗತಿ. ಅವರ ಇಹಜೀವನದ ಕೊನೆಕೊನೆಯ ಕೆಲವು ದಿವಸಗಳಲ್ಲಿ ಅವರ ಮನಸ್ಸನ್ನು ವಿಸ್ಮರಣೆ ಆವರಿಸಿತ್ತು. (ಸ್ವರ್ಗವಾಸ : 25 ಜನವರಿ 2014).

ಶರ್ಮರು ಕೊಟ್ಟು ಹೋಗಿರುವ ಸಾರಸ್ವತ ದೇಣಿಗೆ ಘನಿಷ್ಠವಾದುದು. ಆದರೆ ಅದನ್ನೂ ಮೀರಿಸುವಂತಹುದು ಮತ್ತು ಅನನ್ಯವೆನ್ನಬಹುದಾದುದು ಅವರ ಮೌಲ್ಯನಿಷ್ಠೆ, ಸಮಾಜಹಿತದೃಷ್ಟಿ, ಉದಾರತೆ, ಪ್ರಸನ್ನತೆ, ಪ್ರಶಾಂತಿ. ಶಾಸ್ತ್ರಪಾಂಡಿತ್ಯವು ಅಂತರಂಗಪಕ್ವತೆಯಾಗಿ ಉತ್ಫುಲ್ಲವಾಗಿರುವ ಇಂತಹ ನಿದರ್ಶನವು ಈಗಿನ ದಿನಗಳಲ್ಲಿ ತುಂಬಾ ವಿರಳವಾಗಷ್ಟೆ ಕಂಡೀತು. ರಂಗನಾಥಶರ್ಮರನ್ನು ನೆನೆವಾಗ ಆರ್ಷಪ್ರಜ್ಞೆ ಹೇಗಿರುತ್ತದೆಂಬುದನ್ನು 'ತದಿದಮಿತಿ ಬುದ್ಧಿಂ ದೃಢಯತಿ'.

## ದೀಪ್ತಶೃಂಗಗಳು

**ಎಸ್. ಆರ್. ರಾಮಸ್ವಾಮಿ**

ಬೇರೆಯವರಿಂದ ಮನ್ನಣೆಯನ್ನಾಗಲಿ ಪದವಿಗೌರವವನ್ನಾಗಲಿ ಎದುರುನೋಡದೆ ಸದಾ ಲೋಕಹಿತಕ್ಕಾಗಿ ಶ್ರಮಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡ ಹಲವರು ಇರುತ್ತಾರೆ. ಇತರರಿಗೆ ಶೀತಲತೆಯನ್ನು ನೀಡುವುದಕ್ಕಾಗಿಯೆ ಬಾಳುವ ಚಂದನತರುವಿನಂತಹ ಮನೋವೃತ್ತಿಯ ಇಂತಹ ಸಜ್ಜನರನ್ನು 'ರತ್ನದೀಪ'ಗಳೆಂದು ಕವಿಗಳು ವರ್ಣಿಸಿದ್ದಾರೆ. ನಮ್ಮ ನಡುವೆಯೇ ಇದ್ದು ತಮ್ಮ ಕಾರ್ಯಕ್ಷೇತ್ರಗಳಲ್ಲಿ ಸಮುನ್ನತರೆನಿಸಿ ಸುತ್ತಲೂ ಕಾಂತಿಯನ್ನು ಪಸರಿಸಿ ಧನ್ಯತೆ ಪಡೆದ ಹಲವರ ವ್ಯಕ್ತಿಚಿತ್ರಣಗಳು ಈ ಸಂಕಲನದಲ್ಲಿವೆ. ವಿದ್ವತ್ತಿನ ಕ್ಷೇತ್ರದಲ್ಲಿ ಮೇರುಸದೃಶರಾದ ಎನ್. ರಂಗನಾಥಶರ್ಮಾ ಮತ್ತು ಎಸ್. ಕೆ. ರಾಮಚಂದ್ರರಾವ್, ಅಧ್ಯಾತ್ಮವಿದ್ಯಾಪ್ರಸಾರಕ ವೇದಾಂತ ಸುಬ್ಬಯ್ಯ, ಜೋಳಿಗೆಮಾತ್ರದ ಆಸರೆಯಿಂದ ಸೇವಾಸಾಮ್ರಾಜ್ಯ ನಿರ್ಮಿಸಿದ ಬೆಳಗೆರೆ ಕೃಷ್ಣಶಾಸ್ತ್ರೀ, ಸಂಗೀತಕಲಾಪ್ರವರ್ತನೆಯ ಮೂಲಕ ನಾಡಿನ ಸಾಂಸ್ಕೃತಿಕ ಬದುಕನ್ನು ಶ್ರೀಮಂತಗೊಳಿಸಿದ ಎಸ್. ವಿ. ನಾರಾಯಣಸ್ವಾಮಿರಾವ್, ಜನಸೇವಕಾಗ್ರಣಿ ಟಿ. ಆರ್. ಶಾಮಣ್ಣ, ಗ್ರಂಥಾಲಯವಿಜ್ಞಾನಪಿತಾಮಹ ಎಸ್. ಆರ್. ರಂಗನಾಥನ್ – ಈ ಏಳು ಮಂದಿ ಅಸಾಮಾನ್ಯ ಸಾಧಕರ ವ್ಯಕ್ತಿತ್ವಸ್ಮರಣಮಾಲಿಕೆ '**ದೀಪ್ತಶೃಂಗಗಳು**'.

ಸಾಹಿತ್ಯ ಸಿಂಧು ಪ್ರಕಾಶನ
ಬೆಂಗಳೂರು-560001

SSP 116

₹ 135